
# ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ

## ಡಿಪ್ಲೋಮಾ (ತೋಟಗಾರಿಕೆ)
## ಎರಡು ವರ್ಷದ ಕೋರ್ಸ್

## ವಿವರಣಾ ಹಾಗೂ ಮಾಹಿತಿ ಪುಸ್ತಕ
## 2020–21

ಡೀನ್ ಸ್ನಾತಕೋತ್ತರ,
ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ
ಉದ್ಯಾನಗಿರಿ, ನವನಗರ, ಬಾಗಲಕೋಟ–587104
Website: www.uhsbagalkot.edu.in


ಬೀದರ್
Bidar
ಗುಲ್ಬರ್ಗಾ
Gulbarga
ಯಾದಗಿರಿ
Yadagiri
ಬಿಜಾಪುರ
Bijapur
ಬಾಗಲಕೋಟೆ
Bagalkot
ಬೆಳಗಾವಿ
Belgaum
ರಾಯಚೂರು
Raichur
ಕೊಪ್ಪಳ
Koppal
ಧಾರವಾಡ
Dharwad
ಗದಗ
Gadag
ಬಳ್ಳಾರಿ
Bellary
ಉತ್ತರ ಕನ್ನಡ
Uttara Kannada
ಹಾವೇರಿ
Haveri
ದಾವಣಗೆರೆ
Davanagere
ಚಿತ್ರದುರ್ಗ
Chitradurga
ಶಿವಮೊಗ್ಗ
Shivamoga
ಉಡುಪಿ
Udupi
ಚಿಕ್ಕಮಗಳೂರು
Chikkamagalur
ತುಮಕೂರು
Tumkur
ಚಿಕ್ಕಬಳ್ಳಾಪುರ
Chikkabalapur
ಕೋಲಾರ
Kolar
ಬೆಂಗಳೂರು ಗ್ರಾಮಾಂತರ
Bangalore Rural
ಬೆಂಗಳೂರು ನಗರ
Bangalore
ಮಂಗಳೂರು
Mangalore
ಹಾಸನ
Hassan
ಮಂಡ್ಯ
Mandya
ರಾಮನಗರ
Ramanagara
ಕೊಡಗು
Kodagu
ಮೈಸೂರು
Mysore
ಚಾಮರಾಜನಗರ
Chamarajanagar

**ಅಭ್ಯರ್ಥಿಯು ಅರ್ಜಿ ನಮೂನೆಯನ್ನು ಭರ್ತಿ ಮಾಡುವ ಮೊದಲು ಈ ಮಾಹಿತಿ ಪುಸ್ತಕವನ್ನು(ಪ್ರಾಸ್ಪೆಕ್ಟಸ್) ಓದುವುದು**

# ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಉದ್ಯಾನಗಿರಿ, ನವನಗರ, ಬಾಗಲಕೋಟ

## ಡಿಪ್ಲೋಮಾ (ತೋಟಗಾರಿಕೆ) ಪ್ರವೇಶಾತಿ 2020–21

### (ಎರಡು ವರ್ಷದ ಕೋರ್ಸ್)

### ಪ್ರವೇಶ ವೇಳಾ ಪಟ್ಟಿ

| ಕ್ರ ಸಂ | ವಿವರಗಳು | ದಿನಾಂಕ |
|---|---|---|
| 1 | ಪ್ರವೇಶಾತಿಗೆ ಅಧಿಸೂಚನೆ ಪ್ರಕಟಣೆ ಹಾಗೂ ವೆಬ್‌ಸೈಟ್‌ನಿಂದ ಅರ್ಜಿ ಡೌನಲೋಡ ಮಾಡಿಕೊಳ್ಳುವ ದಿನಾಂಕ | **01.09.2020** |
| 2 | ಭರ್ತಿ ಮಾಡಿದ ಅರ್ಜಿಗಳನ್ನು **ಡೀನ್ ಸ್ನಾತಕೋತ್ತರ, ತೋ.ವಿ.ವಿ., ಬಾಗಲಕೋಟ** ಇಲ್ಲಿಗೆ ಸಲ್ಲಿಸಲು ಕೊನೆಯ ದಿನಾಂಕ | **30.09.2020** |
| 3 | ವಿಶೇಷ ವರ್ಗಗಳ ಅಭ್ಯರ್ಥಿಗಳ ಮೂಲ ಪ್ರತಿಗಳ ಪರಿಶೀಲನೆ<br>(ಎ) ಎನ್‌ಸಿಸಿ/ಕ್ರೀಡೆ/ಸ್ಕೌಟ್ಸ್ & ಗೈಡ್<br>(ಬಿ) ಯೋಧರು/ಮಾಜಿ ಯೋಧರು/ಆಂಗ್ಲೋ ಇಂಡಿಯನ್<br>(ಸಿ) ಅಂಗವಿಕಲರು/ಸಿ.ಎ.ಪಿ.ಎಫ್ | **05.10.2020 ರಂದು ಬೆಳಗ್ಗೆ 10.00 ಗಂಟೆಗೆ ಕುಲಸಚಿವರ ಕಾರ್ಯಾಲಯ, ತೋ.ವಿ.ವಿ., ಬಾಗಲಕೋಟದಲ್ಲಿ** |
| 4 | ಅರ್ಹತಾ ಪಟ್ಟಿ ಪ್ರಕಟಣೆ | **08.10.2020** |
| 5 | ಆಯ್ಕೆಯಾದ ಅಭ್ಯರ್ಥಿಗಳ ಮೊದಲನೇ ಪಟ್ಟಿ ಪ್ರಕಟಣೆ | **10.10.2020** |
| 6 | ಮೊದಲನೇ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಸಂಬಂಧಪಟ್ಟ ಕಾಲೇಜಿಗೆ ಹಾಜರಾಗಿ ಮೂಲ ದಾಖಲಾತಿಗಳ ಪರಿಶೀಲನೆ ಮಾಡಿಕೊಳ್ಳುವುದು, ಶುಲ್ಕ ಪಾವತಿಸುವುದು ಹಾಗೂ ನೋಂದಣಿ ಮಾಡಿಸುವುದು | **12.10.2020 ರಿಂದ 17.10.2020** |
| 7 | ಆಯ್ಕೆಯಾದ ಅಭ್ಯರ್ಥಿಗಳ ಎರಡನೇಯ ಪಟ್ಟಿ ಪ್ರಕಟಣೆ | **22.10.2020** |
| 8 | ಎರಡನೇ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಸಂಬಂಧಪಟ್ಟ ಕಾಲೇಜಿಗೆ ಹಾಜರಾಗಿ ಮೂಲ ದಾಖಲಾತಿಗಳ ಪರಿಶೀಲನೆ ಮಾಡಿಕೊಳ್ಳುವುದು, ಶುಲ್ಕ ಪಾವತಿಸುವುದು ಹಾಗೂ ನೋಂದಣಿ ಮಾಡಿಸುವುದು | **23.10.2020 ರಿಂದ 29.10.2020** |
| 9 | 2020–21ರ ಮೊದಲನೆಯ ಷಾಣ್ಮಾಸಿಕ (ಸೆಮಿಸ್ಟರ್) ಪ್ರಾರಂಭ ದಿನಾಂಕ | **02.11.2020**** |

**ಸದರಿ ದಿನಾಂಕವು ಕರ್ನಾಟಕ ಸರ್ಕಾರದ ಆದೇಶಕ್ಕೆ ಒಳಪಟ್ಟಿರುತ್ತದೆ.

**ಸೂಚನೆ: ಮೇಲಿನ ಕಾರ್ಯಕ್ರಮ ಪಟ್ಟಿಯಲ್ಲಿ ಯಾವುದೇ ಬದಲಾವಣೆಯಾಗಬಹುದಾಗಿದ್ದು ಅದಕ್ಕಾಗಿ ವೆಬ್‌ಸೈಟ್ www.uhsbagalkot.edu.in ಗಮನಿಸುವುದು.**

**ಭರ್ತಿ ಮಾಡಿದ ಅರ್ಜಿಗಳನ್ನು ಅಂಚೆ ಮೂಲಕ ಅಥವಾ ಖುದ್ದಾಗಿ ತಲುಪಿಸಲು ಕೊನೆಯ ದಿನಾಂಕ 30.09.2020 (ಸಂಜೆ 5.00 ಗಂಟೆಗೆ) ಅರ್ಜಿಗಳನ್ನು ಡೀನ್(ಸ್ನಾತಕೋತ್ತರ), ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಉದ್ಯಾನಗಿರಿ, ನವನಗರ, ಬಾಗಲಕೋಟ–587104 ಇಲ್ಲಿ ತಲುಪಿಸುವುದು.**

*(ಕಛೇರಿ ಸಮಯ: ಸೋಮವಾರದಿಂದ ಶುಕ್ರವಾರದವರೆಗೆ ಬೆಳಿಗ್ಗೆ 9.00 ಘಂಟೆಯಿಂದ ಸಂಜೆ 5.00 ರವರೆಗೆ ಹಾಗೂ ಶನಿವಾರ ಬೆಳಿಗ್ಗೆ 9.00 ಘಂಟೆಯಿಂದ ಮಧ್ಯಾಹ್ನ 1.00 ರವರೆಗೆ)*

| ಡಿಪ್ಲೋಮಾ (ತೋಟಗಾರಿಕೆ) ಎರಡು ವರ್ಷದ ಕೋರ್ಸ್ ಪ್ರವೇಶ ಆಯ್ಕೆ ಸಮಿತಿ 2020–21 | |
|---|---|
| ಶಿಕ್ಷಣ ನಿರ್ದೇಶಕರು, ತೋ.ವಿ.ವಿ., ಬಾಗಲಕೋಟ | ಅಧ್ಯಕ್ಷರು |
| ಕುಲಸಚಿವರು, ತೋ.ವಿ.ವಿ., ಬಾಗಲಕೋಟ | ಸದಸ್ಯರು |
| ಡೀನ್ ವಿದ್ಯಾರ್ಥಿ ಕಲ್ಯಾಣ, ತೋ.ವಿ.ವಿ., ಬಾಗಲಕೋಟ | ಸದಸ್ಯರು |
| ಹಣಕಾಸು ನಿಯಂತ್ರಣಾಧಿಕಾರಿಗಳು, ತೋ.ವಿ.ವಿ., ಬಾಗಲಕೋಟ | ಸದಸ್ಯರು |
| ಡೀನ್, ತೋ.ಮ.ವಿ., ಬಾಗಲಕೋಟ | ಸದಸ್ಯರು |
| ಡೀನ್, ಕಿ.ರಾ.ಚ., ತೋ.ಮ.ವಿ., ಅರಭಾವಿ | ಸದಸ್ಯರು |
| ಡೀನ್, ತೋ.ಮ.ವಿ., ಕೋಲಾರ | ಸದಸ್ಯರು |
| ಡೀನ್(ಸ್ನಾತಕೋತ್ತರ) ತೋ.ವಿ.ವಿ., ಬಾಗಲಕೋಟ | ಸದಸ್ಯರು ಹಾಗೂ ಸಂಯೋಜಕರು |

## ರ್‍ಯಾಗಿಂಗ್ ಬಗ್ಗೆ ಎಚ್ಚರಿಕೆ

ರ್‍ಯಾಗಿಂಗ್ ಒಂದು ಶಿಕ್ಷಾರ್ಹ ಅಪರಾಧವಾಗಿದ್ದು ಯಾವುದೇ ವಿದ್ಯಾರ್ಥಿ ಇತರ ವಿದ್ಯಾರ್ಥಿಯನ್ನು ದೈಹಿಕವಾಗಿ ಅಥವಾ ಮಾನಸಿಕವಾಗಿ ರ್‍ಯಾಗಿಂಗ್ ಮಾಡಿದಲ್ಲಿ ಆತನನ್ನು /ಆಕೆಯನ್ನು ಕಾಲೇಜಿನಿಂದ ಉಚ್ಛಾಟಿಸಲಾಗುವುದು/ಪೋಲಿಸ್ ಕೇಸ್ ದಾಖಲಿಸಲಾಗುವುದು/ಪ್ರವೇಶವನ್ನು ರದ್ದುಪಡಿಸಲಾಗುವುದೆಂಬ ಎಚ್ಚರಿಕೆಯನ್ನು ನೀಡಲಾಗಿದೆ.

## ಡಿಪ್ಲೋಮಾ (ತೋಟಗಾರಿಕೆ) ಎರಡು ವರ್ಷದ ಕೋರ್ಸ್

ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕೃಷಿ/ತೋಟಗಾರಿಕಾ ಸಹಾಯಕರ ಕೊರತೆಯಿಂದಾಗಿ ಒಕ್ಕಲುತನದ ತಂತ್ರಜ್ಞಾನವು ಸಮರ್ಪಕವಾಗಿ ರೈತ ಸಮುದಾಯಕ್ಕೆ ಸರಿಯಾದ ಸಮಯದಲ್ಲಿ ತಲುಪದೆ ಒಕ್ಕಲುತನದ ಒಟ್ಟಾರೆ ಅಭಿವೃದ್ಧಿಯು ನಿರೀಕ್ಷಿತ ಮಟ್ಟದಲ್ಲಿ ಸಾಗುತ್ತಿಲ್ಲ.

ಸಮಗ್ರ ಕೃಷಿ ಪದ್ಧತಿಯ ಪ್ರಾಮುಖ್ಯತೆ ಹಾಗೂ ಪ್ರಯೋಜನೆಗಳನ್ನು ಮನಗಂಡು ಕರ್ನಾಟಕ ಘನ ಸರ್ಕಾರವು ತನ್ನ ಐತಿಹಾಸಿಕ ಕೃಷಿ ಅಭಿವೃದ್ಧಿಪರ ನಿಲುವನ್ನು ರಾಜ್ಯದ ಕೃಷಿ ಅಭಿವೃದ್ಧಿಗೆ ಪೂರಕವಾಗುವಂತೆ ಕೃಷಿಗೆ ವಿಶೇಷ ಅನುದಾನವನ್ನು 2011–12 ಹಾಗೂ 2012–13ರಲ್ಲಿ ಮಂಡಿಸಲಾಯಿತು. ಇದಲ್ಲದೇ ತೋಟಗಾರಿಕೆ, ಕೃಷಿ ಹಾಗೂ ಪೂರಕ ಕಸಬುಗಳ ಸರ್ವಾಂಗೀಣ ಅಭಿವೃದ್ಧಿಗೆ ಸೂಕ್ತವಾದ ಹಾಗೂ ಪೂರಕವಾದ ರೀತಿಯಲ್ಲಿ ನೀತಿನಿಯಮಗಳನ್ನು ರೂಪಿಸಿ ಅವಶ್ಯಕವಾದ ಹಣಕಾಸಿನ ಸೌಲಭ್ಯ ಒದಗಿಸಿದೆ. ಒಕ್ಕಲುತನಕ್ಕೆ ಸಂಬಂಧಿಸಿದ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ, ಮಾನವ ಸಂಪನ್ಮೂಲ ಅಭಿವೃದ್ಧಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಸ್ವಯಂ ಉದ್ಯೋಗ ಕಲ್ಪಿಸುವ ಉದ್ದೇಶಗಳಿಂದ ಕೃಷಿ, ತೋಟಗಾರಿಕೆ ಹಾಗೂ ಪಶುಸಂಗೋಪನೆ ವಿಷಯಗಳಲ್ಲಿ ಡಿಪ್ಲೋಮಾ ಕೋರ್ಸ್‌ನ್ನು ಪ್ರಾರಂಭಿಸಲಾಗಿದೆ. ಈ ದಿಶೆಯಲ್ಲಿ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು ಮೊದಲ ಬಾರಿಗೆ 2012–13ನೇ ವರ್ಷದಿಂದ ತೋಟಗಾರಿಕೆಯಲ್ಲಿ ಒಂದು ವರ್ಷದ ಅವಧಿಯ ಡಿಪ್ಲೋಮಾ ಕೋರ್ಸ್‌ನ್ನು ರಾಷ್ಟ್ರೀಯ ತೋಟಗಾರಿಕೆ ಮಿಷನ್ (NHM) ಅಡಿಯಲ್ಲಿ ಪ್ರಾರಂಭಿಸಿತು. 2013–14 ನೇ ಸಾಲಿನಿಂದ ಎರಡು ವರ್ಷದ ಡಿಪ್ಲೋಮಾ ಕೋರ್ಸ್‌ನ್ನು ಎರಡು ಕೇಂದ್ರಗಳಲ್ಲಿ ಪ್ರಾರಂಭಿಸಲಾಯಿತು. 2017–18 ನೇ ಸಾಲಿನಿಂದ ಮತ್ತೇ ಎರಡು ಕೇಂದ್ರಗಳಲ್ಲಿ ಹೊಸದಾಗಿ ಎರಡು ವರ್ಷದ ಡಿಪ್ಲೋಮಾ ಕೋರ್ಸ್‌ನ್ನು ಪ್ರಾರಂಭಿಸಲಾಗಿದೆ. ಪ್ರಸ್ತುತ 2020–21ನೇ ಸಾಲಿನಲ್ಲಿ ತೋಟಗಾರಿಕೆಯಲ್ಲಿ ಎರಡು ವರ್ಷಗಳ ಡಿಪ್ಲೋಮಾ ಕೋರ್ಸ್‌ನ್ನು ಒಟ್ಟು ಎರಡು ಕೇಂದ್ರಗಳಲ್ಲಿ ಮುಂದುವರೆಸಲಾಗುತ್ತಿದೆ.

**ಡಿಪ್ಲೋಮಾ (ತೋಟಗಾರಿಕೆ) ಎರಡು ವರ್ಷದ ಕೋರ್ಸಿಗೆ ಪ್ರವೇಶ ಬಯಸುವ ಅಭ್ಯರ್ಥಿಗಳಿಗೆ ಅವಶ್ಯವಿರುವ ಮಾಹಿತಿ ಈ ಕೆಳಗಿನಂತಿದೆ.**

- ಈ ಕೋರ್ಸ್‌ಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ಯಲ್ಲಿ ಉತ್ತೀರ್ಣರಾಗಿರಬೇಕು.
- ಡಿಪ್ಲೋಮಾ (ತೋಟಗಾರಿಕೆ) ಎರಡು ವರ್ಷದ ಕೋರ್ಸ್‌ನಲ್ಲಿ ವಿದ್ಯಾರ್ಥಿಗಳು ತೋಟಗಾರಿಕೆ ಹಾಗೂ ತೋಟಗಾರಿಕೆಗೆ ಸಂಬಂಧಪಟ್ಟ ವಿಷಯಗಳಾದ ಬೀಜೋತ್ಪಾದನೆ, ಸಸ್ಯಾಭಿವೃದ್ಧಿ ಮತ್ತು ಸಸ್ಯಪಾಲನೆ, ಅಂಗಾಂಶ ಕೃಷಿ, ಸಂರಕ್ಷಣೆ ಬೇಸಾಯ, ವಾಣಿಜ್ಯ ಪುಷ್ಪ ಬೇಸಾಯ, ಮಣ್ಣು ಮತ್ತು ನೀರು ನಿರ್ವಹಣೆ, ಖುಷ್ಕಿ ತೋಟಗಾರಿಕೆ ಪದ್ಧತಿಗಳು, ಗೊಬ್ಬರಗಳ ಸಮರ್ಪಕ ಬಳಕೆ, ಸಾವಯವ ಬೇಸಾಯ ಪದ್ಧತಿಗಳು, ಸಸ್ಯ ಸಂರಕ್ಷಣೆ, ಅರ್ಥಶಾಸ್ತ್ರ, ತೋಟಗಾರಿಕೆ ವ್ಯವಹಾರ ಹಾಗೂ ನಿರ್ವಹಣೆ, ತೋಟಗಾರಿಕೆ ಉತ್ಪನ್ನಗಳ ಮೌಲ್ಯವನ್ನು ಹೆಚ್ಚಿಸುವುದು ಹಾಗೂ ವಿವಿಧ ಯಂತ್ರೋಪಕರಣಗಳು ಹಾಗೂ ಅವುಗಳ ನಿರ್ವಹಣೆ ವಿಷಯಗಳ ಬಗ್ಗೆ ಅಭ್ಯಸಿಸುತ್ತಾರೆ.
- ಈ ಕೋರ್ಸ್‌ದಲ್ಲಿ ವಿದ್ಯಾರ್ಥಿಗಳಿಗೆ ಪಠ್ಯಕ್ರಮದ ವ್ಯಾಸಂಗದಲ್ಲಿ ಶೇಕಡ 75 ರಷ್ಟು ವಿಷಯವನ್ನು ಪ್ರಾಯೋಗಿಕವಾಗಿ ಕಲಿಯುವಂತೆ ಒತ್ತು ನೀಡಲಾಗುವುದು.
- ತೋಟಗಾರಿಕೆ ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ 2020–21ನೇ ಸಾಲಿನಲ್ಲಿ 60 ವಿದ್ಯಾರ್ಥಿಗಳನ್ನು ಡಿಪ್ಲೋಮಾ (ತೋಟಗಾರಿಕೆ) ಎರಡು ವರ್ಷದ ಕೋರ್ಸ್‌ಗೆ ಆಯ್ಕೆ ಮಾಡಲಾಗುವುದು.

**ಡಿಪ್ಲೋಮಾ (ತೋಟಗಾರಿಕೆ) ಪಡೆದವರು ಏನು ಮಾಡಬಹುದು ?**

ಮುಖ್ಯವಾಗಿ, ಡಿಪ್ಲೋಮಾದಲ್ಲಿ ತೇರ್ಗಡೆಯಾದವರು ತೋಟಗಾರಿಕೆಯಲ್ಲಿ ಸಶಕ್ತರಾಗಿ ನಿರತರಾಗಲು, ಗ್ರಾಮೀಣ ಪ್ರದೇಶದಿಂದ ನಗರಗಳಿಗೆ ವಲಸೆ ಹೋಗುವ ಹಂಬಲವನ್ನು ನಿಯಂತ್ರಿಸುವುದರ ಜೊತೆಗೆ ಈ ಪ್ರದೇಶಗಳಲ್ಲಿ ತೋಟಗಾರಿಕೆಯನ್ನು ಅಭಿವೃದ್ಧಿಪಡಿಸಿ ಪ್ರಗತಿಪರ ರೈತರಾಗುವಲ್ಲಿ ನೆರವಾಗುತ್ತದೆ.

- ವಿದ್ಯಾರ್ಥಿಗಳು ಗ್ರಾಮೀಣ ಮಟ್ಟದಲ್ಲಿ ತೋಟಗಾರಿಕೆ ಬೆಳೆಗಳ ಉತ್ಪಾದನೆ ಹಾಗೂ ಅವುಗಳ ಮೌಲ್ಯವರ್ಧನೆಗೆ ಸಂಬಂಧಪಟ್ಟ ತಾಂತ್ರಿಕತೆಗಳನ್ನು ರೈತರಿಗೆ ಮುಟ್ಟಿಸುವ ದಿಸೆಯಲ್ಲಿ ಮುಂಚೂಣಿಯ ಕಾರ್ಯಕರ್ತರಾಗಿ ಹೊರಹೊಮ್ಮುತ್ತಾರೆ.

- ಡಿಪ್ಲೋಮಾ (ತೋಟಗಾರಿಕೆ)ಯಲ್ಲಿ ತೇರ್ಗಡೆಯಾದವರಿಗೆ ರಾಜ್ಯ ಸರಕಾರದ ಅಭಿವೃದ್ಧಿ ಇಲಾಖೆಗಳಾದ ತೋಟಗಾರಿಕೆ, ಕೃಷಿ, ಜಲಾನಯನ ಅಭಿವೃದ್ಧಿ ಹಾಗೂ ಕೃಷಿಗೆ ಸಂಬಂಧಪಟ್ಟ ನಿಗಮ/ಮಂಡಳಿಗಳು, ಕೃಷಿ ವಿಶ್ವವಿದ್ಯಾಲಯಗಳು, ಬೀಜೋತ್ಪಾದನಾ ಕಂಪನಿಗಳು, ರಸಗೊಬ್ಬರ ಮತ್ತು ಕೀಟನಾಶಕ ಕಂಪನಿಗಳು, ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣಾ ಘಟಕಗಳು, ಆಮದು ಮತ್ತು ರಫ್ತು ಕಂಪನಿ, ರಾಷ್ಟ್ರೀಯ ತೋಟಗಾರಿಕೆ ಮಿಷನ್, ಮುಂತಾದಕಡೆಗಳಲ್ಲಿ ಉದ್ಯೋಗಾವಕಾಶಗಳ ಸೌಲಭ್ಯ ದೊರೆಯುವ ಸಾಧ್ಯತೆ ಇರುತ್ತದೆ.

- ಡಿಪ್ಲೋಮಾ (ತೋಟಗಾರಿಕೆ)ಯಲ್ಲಿ ಎರಡು ವರ್ಷದ ಕೋರ್ಸ್‌ದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಬಿ.ಎಸ್ಸಿ (ಹಾನರ್ಸ್.) ತೋಟಗಾರಿಕೆ ಪದವಿ ಪ್ರವೇಶಾತಿಯಲ್ಲಿ ಶೇಕಡಾ 5 ರಷ್ಟು ಸೀಟುಗಳನ್ನು ಸಹ ಕಾಯ್ದಿರಿಸಲಾಗಿದೆ. [ಲ್ಯಾಟ್ರಲ್ ಎಂಟ್ರಿ ಟೂ ಬಿ.ಎಸ್ಸಿ (ಹಾನರ್ಸ್.) ತೋಟಗಾರಿಕೆ]

- **ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟವು ಯಾವುದೇ ಉದ್ಯೋಗ ಭರವಸೆಯ ಆಧಾರದ ಮೇಲೆ ಈ ಕೋರ್ಸ್‌ನ್ನು ನಡೆಸುವುದಿಲ್ಲ.**

**ತೋಟಗಾರಿಕೆ ಡಿಪ್ಲೋಮಾ ಮಹಾವಿದ್ಯಾಲಯಗಳು ಮತ್ತು ಪ್ರವೇಶಕ್ಕೆ ಅಭ್ಯರ್ಥಿಗಳ ಸಂಖ್ಯೆ**

| 2020–21 ರಲ್ಲಿ ಡಿಪ್ಲೋಮಾ (ತೋಟಗಾರಿಕೆ) ಎರಡು ವರ್ಷದ ಕೋರ್ಸ್ ಕೇಂದ್ರಗಳು | ವಿದ್ಯಾರ್ಥಿಗಳ ಸಂಖ್ಯೆ |
|---|---|
| **1. ಕಿತ್ತೂರರಾಣಿ ಚನ್ನಮ್ಮ ತೋಟಗಾರಿಕಾ ಮಹಾವಿದ್ಯಾಲಯ, ಅರಭಾವಿ** | **30** |
| **2. ತೋಟಗಾರಿಕೆ ಮಹಾವಿದ್ಯಾಲಯ, ಕೋಲಾರ (ಹೊಗಳಗೆರೆ)** | **30** |
| **ಒಟ್ಟು ವಿದ್ಯಾರ್ಥಿಗಳು** | 60 |

**ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಡಿಪ್ಲೋಮಾ (ತೋಟಗಾರಿಕೆ) ಎರಡು ವರ್ಷದ ಕೋರ್ಸ್ ಬಗ್ಗೆ ಶೈಕ್ಷಣಿಕ ಮಾಹಿತಿ:**

ಡಿಪ್ಲೋಮಾ (ತೋಟಗಾರಿಕೆ) ಎರಡು ವರ್ಷದ ಕೋರ್ಸ್‌ಗೆ ಸಂಬಂಧಪಟ್ಟಂತೆ ರೂಪಿಸಲಾದ ನಿಯಮಾವಳಿಗಳು, ಕೋರ್ಸ್‌ಗಳ ಶೈಕ್ಷಣಿಕ ಮಾಹಿತಿ, ಪರೀಕ್ಷೆ ಮತ್ತು ಮೌಲ್ಯಮಾಪನ ಪದ್ಧತಿ ಹಾಗೂ ಶಿಸ್ತು ನಿಯಮಗಳನ್ನು ಒಳಗೊಂಡಿದ್ದು, ಇದನ್ನು ನೋಂದಣಿ ಮಾಡಿದವರಿಗೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಡಿಪ್ಲೋಮಾ (ತೋಟಗಾರಿಕೆ) ಎರಡು ವರ್ಷದ ಕೋರ್ಸ್‌ದ ಶೈಕ್ಷಣಿಕ ಮಾಹಿತಿ ಹಾಗೂ ನಿಬಂಧನೆಗಳ ಮಾಹಿತಿ ಕೈಪಿಡಿಯನ್ನು ಒದಗಿಸಲಾಗುವುದು.

**ಪ್ರವೇಶಕ್ಕೆ ಶೈಕ್ಷಣಿಕ ಅರ್ಹತೆ ಹಾಗೂ ಆಯ್ಕೆ :**

ಈ ಕೋರ್ಸ್‌ಗೆ ಪ್ರವೇಶ ಬಯಸುವ ಅಭ್ಯರ್ಥಿಯು ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಮತ್ತು ಅರ್ಜಿ ಸಲ್ಲಿಸಲು ನಿಗದಿತ ಕೊನೆಯ ದಿನಾಂಕದಂದು 25 ವರ್ಷ ಮೀರಿರಬಾರದು. ಎಸ್.ಎಸ್.ಎಲ್.ಸಿ./ತತ್ಸಮಾನ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಮೆರಿಟ್ ಹಾಗೂ ರೋಸ್ಟರ್ ಪದ್ದತಿ ಆಧರಿಸಿ ಅಭ್ಯರ್ಥಿಗಳ ಆಯ್ಕೆಯನ್ನು ಮಾಡಲಾಗುವುದು. ಅರ್ಜಿ ಸಲ್ಲಿಸುವಾಗ ಅಭ್ಯರ್ಥಿಗಳು ಮೂಲ ಎಸ್.ಎಸ್.ಎಲ್.ಸಿ ಅಂಕಪಟ್ಟಿ ವಿತರಣೆಯಾಗದಿದ್ದಲ್ಲಿ ತಾವು ಉತ್ತೀರ್ಣರಾದ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು ನೀಡಿರುವ ಅಂಕಪಟ್ಟಿಯ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಅರ್ಜಿಯೊಂದಿಗೆ ಲಗತ್ತಿಸಬೇಕು.

**ಬೋಧನಾಕ್ರಮ ಮತ್ತು ಮಾಧ್ಯಮ** : ಡಿಪ್ಲೋಮಾ (ತೋಟಗಾರಿಕೆ) ಎರಡು ವರ್ಷದ ಕೋರ್ಸ್‌ನ್ನು ಕನ್ನಡ ಮಾಧ್ಯಮದಲ್ಲಿ ಸೆಮಿಸ್ಟರ್ ಪದ್ಧತಿಯಲ್ಲಿ ಬೋಧಿಸಲಾಗುವುದು.

**ಡಿಪ್ಲೋಮಾ (ತೋಟಗಾರಿಕೆ) ಸಾಮಾನ್ಯ ಅವಧಿ :** ಡಿಪ್ಲೋಮಾ (ತೋಟಗಾರಿಕೆ)ಯ ನಿಗದಿತ ಅವಧಿ ಎರಡು ವರ್ಷ(ನಾಲ್ಕು ಸೆಮಿಸ್ಟರ್)ಗಳನ್ನು ಒಳಗೊಂಡಿರುತ್ತದೆ. ಗರಿಷ್ಠ ಅವಧಿ ನಾಲ್ಕು ವರ್ಷ ಅಥವಾ ಎಂಟು ಸೆಮಿಸ್ಟರ್‌ಗಳಾಗಿರುವುದು.

**ಸೀಟುಗಳ ಮೀಸಲಾತಿ**

**ಕಾಲಾನುಕಾಲಕ್ಕೆ ಅನ್ವಯವಾಗುವಂತೆ ವಿಶ್ವವಿದ್ಯಾಲಯದಲ್ಲಿ ಮೀಸಲಾತಿ ಮೇರೆಗೆ ಪ್ರವೇಶಾವಕಾಶಗಳನ್ನು ಈ ಮುಂದಿನಂತೆ ನೀಡಲಾಗಿರುತ್ತದೆ ಹಾಗೂ ಅನುಬಂಧ-1 ರಲ್ಲಿ ಮಹಾವಿದ್ಯಾಲಯಗಳವಾರು ಸೀಟುಗಳ ವಿವರಗಳನ್ನು (Seat Matrix) ನೀಡಲಾಗಿದೆ.**

**1)** 371 (ಜೆ) ರ ಆದೇಶ ಹೈದರಾಬಾದ್ ಕರ್ನಾಟಕ ಮೀಸಲಾತಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಕರ್ನಾಟಕ ಸರ್ಕಾರ ವರ್ಗೀಕರಿಸಿರುವಂತೆ ಇತರ ಹಿಂದುಳಿದ ವರ್ಗಗಳಿಗೆ(ಓ.ಬಿ.ಸಿ) : ಸರ್ಕಾರ ಆದೇಶ ಸಂ SWL251BCA94, ಬೆಂಗಳೂರು, ದಿನಾಂಕ 31.01.1995 ರ ಮೂಲಕ ವರ್ಗೀಕರಿಸಿರುವಂತೆ ಹಾಗೂ ಕಾಲಾನುಕಾಲ ತಿದ್ದುಪಡಿ ಮಾಡಿದಂತೆ ಪ್ರವರ್ಗ-1, 2ಎ, 2ಬಿ, 3ಎ, 3ಬಿ ಗಳಿಗೆ ಸಲಹಾ ಸೇವೆಯ ಮೂಲಕ ನಿಗದಿಪಡಿಸಿದಂತೆ ಹಾಗೂ ಕರ್ನಾಟಕ ಸರ್ಕಾರದ ಮೀಸಲಾತಿ ಕಾರ್ಯನೀತಿಯಂತೆ ಲಂಬ ಮೀಸಲಾತಿ ನೀಡಲಾಗುತ್ತದೆ.

**ಈ ಮೇಲಿನ ಪ್ರತಿಯೊಂದು ಲಂಬವರ್ಗಗಳಡಿ ಈ ಮುಂದಿನಂತೆ ಮೀಸಲಾತಿಯನ್ನು ಕಲ್ಪಿಸಲಾಗಿದೆ :**

ಅ) **ಗ್ರಾಮೀಣ** : ಕರ್ನಾಟಕ ಮುನಿಸಿಪಾಲಿಟಿ ಅಧಿನಿಯಮ 1964 ಅಥವಾ ಕರ್ನಾಟಕ ಮುನ್ಸಿಪಲ್ ಮಂಡಳಿಗಳ ಅಧಿನಿಯಮ 1976 ರಲ್ಲಿ ಸೂಚಿಸಿರುವಂತೆ ಸರ್ಕಾರದ ಅದೇಶ ಸಂ: ED 01 TEC 2002, ಬೆಂಗಳೂರು, ದಿನಾಂಕ 1-2-2002 ರನ್ವಯ ಹಾಗೂ ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳ ರಾಜ್ಯದ ಸರ್ಕಾರಿ ಸೇವೆಗಳ ಹುದ್ದೆಗಳಿಗೆ ನೇಮಕಾತಿಯ ಮೀಸಲಾತಿ ಅಧಿನಿಯಮ, 2000-2001 ರ ಕರ್ನಾಟಕ ಅಧಿನಿಯಮ 1ರಲ್ಲಿ ನಿರ್ದಿಷ್ಟಪಡಿಸಿರುವಂತೆ 1 ನೇ ತರಗತಿಯಿಂದ 10 ನೇ ತರಗತಿಯವರೆಗೆ ಸಂಪೂರ್ಣವಾಗಿ ಕರ್ನಾಟಕ ರಾಜ್ಯದಲ್ಲಿನ ದೊಡ್ಡ ನಗರ ಪ್ರದೇಶಗಳನ್ನು, ಸಣ್ಣ ನಗರ ಪ್ರದೇಶಗಳನ್ನು ಅಥವಾ ಟ್ರಾನ್ಸಿಷನಲ್ ಪ್ರದೇಶಗಳನ್ನು ಹೊರತುಪಡಿಸಿ ಇತರೆ ಸ್ಥಳಗಳಲ್ಲಿ ವ್ಯಾಸಂಗ ಮಾಡಿರುವಂತಹ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಮೀಸಲಾತಿ ಕಲ್ಪಿಸಲಾಗಿದೆ.

ಕೆನೆಪದರದಡಿ ಬಾರದಿರುವಂತಹ ತಂದೆ ತಾಯಿಗಳ ಮಕ್ಕಳು ನಗರ ಪ್ರದೇಶಗಳನ್ನು ಹೊರತುಪಡಿಸಿ ಇತರ ಪ್ರದೇಶಗಳಲ್ಲಿ 1 ರಿಂದ 10 ನೇ ತರಗತಿಯವರೆಗೆ ಸಂಪೂರ್ಣವಾಗಿ 10 ವರ್ಷಗಳ ವ್ಯಾಸಂಗ ಮಾಡಿರುವಂತಹ ಅಭ್ಯರ್ಥಿಗಳು ಗ್ರಾಮೀಣ ಮೀಸಲಾತಿಯನ್ನು ಪಡೆಯಲು ಅರ್ಹರಾಗಿರುತ್ತಾರೆ. ಆದರೂ ನಗರ ಪ್ರದೇಶವೆಂದು ಅಧಿಸೂಚಿತವಾಗುವ ಮೊದಲು ಈ ಪ್ರದೇಶಗಳಲ್ಲಿ ಅಭ್ಯರ್ಥಿಗಳು 1 ರಿಂದ 10 ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದಲ್ಲಿ ಅಂಥವರು ಗ್ರಾಮೀಣ ಮೀಸಲಾತಿಯನ್ನು ಪಡೆಯಲು ಅರ್ಹರಾಗಿರುತ್ತಾರೆ. ಗ್ರಾಮೀಣ ಮೀಸಲಾತಿ ಕೋರುವ ವಿದ್ಯಾರ್ಥಿಗಳು ಸಲ್ಲಿಸುವ ಗ್ರಾಮೀಣ ಪ್ರಮಾಣ ಪತ್ರದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಹಿಯನ್ನು ಕಡ್ಡಾಯವಾಗಿ ಹೊಂದಿರಬೇಕು.

ಆ) **ಕನ್ನಡ ಮಾಧ್ಯಮ ವ್ಯಾಸಂಗ**: ಸರ್ಕಾರಿ ಆದೇಶ ಸಂ. **ED 118 UEC 2000,** ಬೆಂಗಳೂರು, ದಿನಾಂಕ 4-6-2000 ಹಾಗೂ ಸರ್ಕಾರಿ ಆದೇಶ ಸಂಖ್ಯೆ. **ED 02 UEC 2002**, ಬೆಂಗಳೂರು ದಿನಾಂಕ 14-10-2005 ರಲ್ಲಿ ತಿದ್ದುಪಡಿ ಮಾಡಿರುವುದರ ಅನ್ವಯ 1 ರಿಂದ 10 ನೇ ತರಗತಿಯವರೆಗೆ ಸಂಪೂರ್ಣ 10 ಶೈಕ್ಷಣಿಕ ವರ್ಷಗಳು ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವಂತಹ ಅಭ್ಯರ್ಥಿಗಳಿಗೆ ಸೀಟುಗಳನ್ನು ಮೀಸಲಾಗಿರಿಸಲಾಗಿದೆ. ಕನ್ನಡ ಮಾಧ್ಯಮದಲ್ಲಿ ಮೀಸಲಾತಿ ಕೋರುವ ವಿದ್ಯಾರ್ಥಿಗಳು ಸಲ್ಲಿಸುವ ಕನ್ನಡ ಮಾಧ್ಯಮ ಪ್ರಮಾಣ ಪತ್ರದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಹಿಯನ್ನು ಕಡ್ಡಾಯವಾಗಿ ಹೊಂದಿರಬೇಕು.

**2)** **ವಿಶೇಷ ವರ್ಗಗಳು :** ಈ ಮುಂದಿನ ವಿಶೇಷ ವರ್ಗಗಳಡಿ ಶೇ 14 ರಷ್ಟು ಮೀಸಲಾತಿಯನ್ನು ಕಲ್ಪಿಸಲಾಗಿದೆ. ಅಭ್ಯರ್ಥಿಗಳು ಸಲ್ಲಿಸಿದ ಪ್ರಮಾಣ ಪತ್ರಗಳ ಸಿಂಧುತ್ವವನ್ನು ನಿರ್ಧರಿಸುವಲ್ಲಿ ಆಯ್ಕೆ ಸಮಿತಿ ತೀರ್ಮಾನವೇ ಅಂತಿಮವಾದುದು. **ಅರ್ಜಿಯೊಂದಿಗೆ ಲಗತ್ತಿಸಿದ ದಾಖಲೆಗಳನ್ನು ಹೊರತುಪಡಿಸಿ ಒಮ್ಮೆ ಅರ್ಜಿ ಸಲ್ಲಿಸಿದ ನಂತರ**

**ಅರ್ಜಿ ಪರಿಶೀಲನೆಯ ಸಮಯದಲ್ಲಾಗಲೀ ಅಥವಾ ಯಾವುದೇ ಸಮಯದಲ್ಲಾಗಲೀ ಹೆಚ್ಚುವರಿ ದಾಖಲೆಗಳನ್ನು ಪರಿಗಣಿಸಲು ಅವಕಾಶವಿರುವುದಿಲ್ಲ.**

**ಎ) ಎನ್.ಸಿ.ಸಿ. : ಕೆಳಗಿನಂತೆ ಅಭ್ಯರ್ಥಿಗಳು**

1) ನವದೆಹಲಿಯ ಡೈರೆಕ್ಟರೇಟ್ ಜನರಲ್ ಆಫ್ ಎನ್‌ಸಿಸಿ ಯವರು ನಡೆಸುವ ಗಣರಾಜ್ಯೋತ್ಸವ ಶಿಬಿರದಲ್ಲಿ ಕರ್ನಾಟಕದಿಂದ ಪಾಲ್ಗೊಂಡಿರಬೇಕು ಹಾಗೂ 8 ರಿಂದ 10 ನೇ ತರಗತಿಯವರೆಗೆ ಕರ್ನಾಟಕದಲ್ಲಿ ವ್ಯಾಸಂಗ ಮಾಡುವ ಮೂರು ವರ್ಷಗಳ ಅವಧಿಯಲ್ಲಿ 'ಎ' ಪ್ರಮಾಣ ಪತ್ರ ಪಡೆದಿರಬೇಕು.

2) ನವದೆಹಲಿಯ ಡೈರೆಕ್ಟರೇಟ್ ಜನರಲ್ ಆಫ್ ಎನ್‌ಸಿಸಿ ಯವರು ನಡೆಸುವ ಈ ಮುಂದಿನ ಶಿಬಿರಗಳಲ್ಲಿ ಪಾಲ್ಗೊಂಡಿರಬೇಕು ಹಾಗೂ 8 ರಿಂದ 10 ನೇ ತರಗತಿಯವರೆಗೆ ಕರ್ನಾಟಕದಲ್ಲಿ ವ್ಯಾಸಂಗ ಮಾಡುವ ಮೂರು ವರ್ಷಗಳ ಅವಧಿಯಲ್ಲಿ 'ಎ' ಪ್ರಮಾಣ ಪತ್ರ ಪಡೆದಿರುವ ಅಭ್ಯರ್ಥಿ:

ಅ) ಅಖಿಲ ಭಾರತ ತಲ್ ಸೈನಿಕ ಶಿಬಿರ (ಬಾಲಕರು) – ಟಿ.ಎಸ್.ಸಿ(ಬಿ)

ಆ) ಅಖಿಲ ಭಾರತ ತಲ್ ಸೈನಿಕ ಶಿಬಿರ (ಬಾಲಕಿಯರು) – ಟಿ.ಎಸ್.ಸಿ(ಬಿ)

ಇ) ಅಖಿಲ ಭಾರತ ನೌ ಸೈನಿಕ ಶಿಬಿರ – ಎನ್.ಎಸ್.ಸಿ

ಈ) ಅಖಿಲ ಭಾರತ ವಾಯು ಸೈನಿಕ ಶಿಬಿರ – ವಿ.ಎಸ್.ಸಿ

ರಾಷ್ಟ್ರೀಯ ಮಟ್ಟದಲ್ಲಿ ಅಖಿಲ ಭಾರತ ಮೊವಾಲಂಕಾರ್ ಶೂಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಡಿ.ಜಿ. ಎನ್.ಸಿ.ಸಿ ತಂಡದ ಭಾಗವಾಗಿ ಅಂತಿಮವಾಗಿ ಆಯ್ಕೆಯಾಗಿರುವ ಅಥವಾ ಯುವಜನ ವಿನಿಮಯ ಕಾರ್ಯಕ್ರಮಗಳಲ್ಲಿ ಮತ್ತು ಡಿ.ಜಿ., ಎನ್.ಸಿ.ಸಿ ಆಯೋಜಿಸುವ ವಿದೇಶಿ ನಾವೆಲ್ ಕ್ರೂಸ್‌ಗಳಲ್ಲಿ ಭಾಗವಹಿಸಿರುವ ಕೆಡೆಟ್‌ಗಳು **ಅಥವಾ**

3) ನವದೆಹಲಿಯ ಡೈರೆಕ್ಟರೇಟ್ ಜನರಲ್ ಆಫ್ ಎನ್‌ಸಿಸಿ ಯವರು ನಡೆಸುವ ಈ ಮುಂದಿನ ಶಿಬಿರಗಳಲ್ಲಿ ಕರ್ನಾಟಕದಿಂದ ಪಾಲ್ಗೊಂಡಿರಬೇಕು ಹಾಗೂ 8 ರಿಂದ 10 ನೇ ತರಗತಿಯವರೆಗೆ ಕರ್ನಾಟಕದಲ್ಲಿ ವ್ಯಾಸಂಗ ಮಾಡುವ ಮೂರು ವರ್ಷಗಳ ಅವಧಿಯಲ್ಲಿ 'ಎ' ಪ್ರಮಾಣ ಪತ್ರ ಪಡೆದಿರುವ ಅಭ್ಯರ್ಥಿ: ಡಿ.ಜಿ., ಎನ್.ಸಿ.ಸಿ/ಕರ್ನಾಟಕ ಮತ್ತು ಗೋವಾದ ಎನ್.ಸಿ.ಸಿ ನಿರ್ದೇಶನಾಲಯ ಆಯೋಜಿಸಿರುವ (ಅ) ಅಖಿಲ ಭಾರತ ತಲ್ ಸೈನಿಕ ಶಿಬಿರ(ಬಾಲಕರು) : ಟಿ.ಎಸ್.ಸಿ(ಬಿ), (ಆ) ಅಖಿಲ ಭಾರತ ತಲ್ ಸೈನಿಕ ಶಿಬಿರ (ಬಾಲಕಿಯರು):ಟಿ.ಎಸ್.ಸಿ(ಜಿ), (ಇ) ಅಖಿಲ ಭಾರತ ನೌ ಸೈನಿಕ್ ಶಿಬಿರ: ಎನ್.ಎಸ್.ಸಿ, (ಈ) ಅಖಿಲ ಭಾರತ ವಾಯು ಸೈನಿಕ ಶಿಬಿರ :ವಿ.ಎಸ್.ಸಿ, (ಉ) ರಾಷ್ಟ್ರೀಯ ಮಟ್ಟದಲ್ಲಿ ಅಖಿಲ ಭಾರತ ಮೊವಾಲಂಕಾರ್ ಶೂಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಕರ್ನಾಟಕ ಮತ್ತು ಗೋವಾಗಳ ಡೈರೆಕ್ಟರೇಟ್ ತಂಡಗಳ ಪರವಾಗಿ ಭಾಗವಹಿಸಿರುವ ಕೆಡೆಟ್‌ಗಳು, ಪರ್ವತಾರೋಹಣ (5,900 ಮೀ.ಗಳಿಗಿಂತ ಹೆಚ್ಚಿನ)ಗಳಲಿ, ಗಾಳಿಶಕ್ತಿಯಿಂದ ಚಲಿಸುವ ನೌಕಾಯಾನಗಳಲ್ಲಿ (401 ಕಿ.ಮೀ.ಗಳು), ಮೋಟಾರ್ ಸೈಕಲ್ ಪ್ರವಾಸಗಳಲ್ಲಿ (3500 ಕಿ.ಮೀ.ಗಳಿಗಿಂತ ಹೆಚ್ಚಿನ) ಮತ್ತು ಸೈಕಲ್ ಪ್ರವಾಸಗಳಲ್ಲಿ (1,500 ಕಿ ಮೀ ಗಳಿಗಿಂತ ಹೆಚ್ಚಿನ) ಭಾಗವಹಿಸಿರುವ ಕೆಡೆಟ್‌ಗಳು ಅಥವಾ

4) ನವದೆಹಲಿಯ ಡೈರೆಕ್ಟರೇಟ್ ಜನರಲ್ ಆಫ್ ಎನ್‌ಸಿಸಿ ಯವರು ನಡೆಸುವ ಈ ಮುಂದಿನ ಶಿಬಿರಗಳಲ್ಲಿ ಕರ್ನಾಟಕದಿಂದ ಪಾಲ್ಗೊಂಡಿರಬೇಕು ಹಾಗೂ 8 ರಿಂದ 10ನೇ ತರಗತಿಯವರೆಗೆ ಕರ್ನಾಟಕದಲ್ಲಿ ವ್ಯಾಸಂಗ ಮಾಡುವ ಮೂರು ವರ್ಷಗಳ ಅವಧಿಯಲ್ಲಿ 'ಎ' ಪ್ರಮಾಣ ಪತ್ರ ಪಡೆದಿರುವ ಅಭ್ಯರ್ಥಿ: (ಅ) ಎನ್‌ಐಸಿ, (ಆ) ಚಾರಣ, (ಇ) ಪರ್ವತಾರೋಹಣ, (ಈ) ಬಿಎಲ್‌ಸಿ, (ಉ) ಎವಿಲ್‌ಸಿ, (ಊ) ಆರ್‌ಸಿಟಿಸಿ, (ಎ) ಸೇನೆ, ನೌಕಾಸೇವೆ, ವಾಯುಸೇನೆ ಮತ್ತು ಆಸ್ಪತ್ರೆ ಅಟ್ಯಾಚ್‌ಮೆಂಟ್ಸ್ ಅಥವಾ

5) 8 ರಿಂದ 10 ನೇ ತರಗತಿಯವರೆಗೆ ಕರ್ನಾಟಕದಲ್ಲಿ ವ್ಯಾಸಂಗ ಮಾಡುವ ಮೂರು ವರ್ಷಗಳ ಅವಧಿಯಲ್ಲಿ 'ಎ' ಪ್ರಮಾಣ ಪತ್ರ ಪಡೆದಿರುವ ಅಭ್ಯರ್ಥಿ

**ಎನ್.ಸಿ.ಸಿ ವರ್ಗದಡಿ ಮೀಸಲಾತಿ ಪ್ರವೇಶಕ್ಕಾಗಿ ಆಯ್ಕೆ ಮಾಡಲು ಈ ಮುಂದಿನ ಆದ್ಯತೆ ಮಾನದಂಡಗಳನ್ನು ಅನುಸರಿಸಲಾಗುವುದು**

**ಆದ್ಯತೆ–1 :** ಎ ಪ್ರಮಾಣ ಪತ್ರ ಪಡೆದಿದ್ದು, ಗಣರಾಜ್ಯೋತ್ಸವ ದಿನಾಚರಣೆ ಶಿಬಿರದಲ್ಲಿ ಅಖಿಲ ಭಾರತ ಅತ್ಯುತ್ತಮ ಕೆಡೆಟ್ ಪ್ರಶಸ್ತಿ ಹಾಗೂ ಚಿನ್ನದ/ಬೆಳ್ಳಿಯ/ಕಂಚಿನ ಪದಕ ಪಡೆದಿರುವ ಅಭ್ಯರ್ಥಿ

**ಆದ್ಯತೆ–2:** 'ಎ' ಪ್ರಮಾಣ ಪತ್ರ ಪಡೆದಿದ್ದು, ಈ ಮೇಲಿನ ಉಪಖಂಡ(2) ರ (ಅ) ನಿಂದ (ಈ) ವರೆಗೆ ಉಲ್ಲೇಖಿಸಿರುವ ಶಿಬಿರಗಳಲ್ಲಿ ಅಖಿಲ ಭಾರತ ಅತ್ಯುತ್ತಮ ಕೆಡೆಟ್ ಪ್ರಶಸ್ತಿ ಹಾಗೂ ಚಿನ್ನದ /ಬೆಳ್ಳಿಯ/ಕಂಚಿನ ಪದಕ ಪಡೆದಿರುವ ಅಭ್ಯರ್ಥಿ

**ಆದ್ಯತೆ–3:** 'ಎ' ಪ್ರಮಾಣ ಪತ್ರ ಪಡೆದಿದ್ದು, ಗಣರಾಜ್ಯೋತ್ಸವ ದಿನಾಚರಣೆ ಶಿಬಿರದಲ್ಲಿ ಕರ್ನಾಟಕದಿಂದ ಪಾಲ್ಗೊಂಡಿರುವ ಅಭ್ಯರ್ಥಿ.

**ಅದ್ಯತೆ–4:** 'ಎ' ಪ್ರಮಾಣ ಪತ್ರ ಪಡೆದಿದ್ದು, ಡಿ.ಜಿ., ಎನ್.ಸಿ.ಸಿ ಯವರು ಆಯೋಜಿಸಿರುವ ಯುವಜನ ವಿನಿಮಯ ಕಾರ್ಯಕ್ರಮ ಹಾಗೂ ವಿದೇಶಿ ನಾವಲ್ ಕ್ರೂಸ್‌ನಲ್ಲಿ ಭಾಗವಹಿಸಿರುವ ಅಭ್ಯರ್ಥಿ

**ಅದ್ಯತೆ–5:** 'ಎ' ಪ್ರಮಾಣ ಪತ್ರ ಪಡೆದಿದ್ದು, ಈ ಮೇಲಿನ ಉಪಖಂಡ(3)ರ(ಅ) ನಿಂದ (ಈ) ವರೆಗೆ ಉಲ್ಲೇಖಿಸಿರುವ ಶಿಬಿರಗಳಲ್ಲಿ ಭಾಗವಹಿಸಿರುವ ಅಭ್ಯರ್ಥಿ

**ಆದ್ಯತೆ–6:** 'ಎ' ಪ್ರಮಾಣ ಪತ್ರ ಪಡೆದಿದ್ದು, ಡಿ.ಜಿ., ಎನ್.ಸಿ.ಸಿ/ಕರ್ನಾಟಕ ಮತ್ತು ಗೋವಾಗಳ ಎನ್.ಸಿ.ಸಿ ನಿರ್ದೇಶನಾಲಯ ಆಯೋಜಿಸಿರುವ ಪರ್ವತಾರೋಹಣ/ನೌಕಾಯಾನ/ಮೋಟರ ಸೈಕಲ್/ಸೈಕ್ಲಿಂಗ್ ಪ್ರವಾಸಗಳಲ್ಲಿ ಪಾಲ್ಗೊಂಡಿರುವ ಅಭ್ಯರ್ಥಿ

**ಆದ್ಯತೆ–7:** 'ಎ' ಪ್ರಮಾಣ ಪತ್ರ ಪಡೆದಿದ್ದು, ಈ ಮೇಲಿನ ಉಪಖಂಡ (4) ರಲ್ಲಿ ಉಲ್ಲೇಖಿಸಿರುವ ಶಿಬಿರಗಳಲ್ಲಿ ಭಾಗವಹಿಸಿರುವ ಅಭ್ಯರ್ಥಿ.

**ಆದ್ಯತೆ–8:** ಕೇವಲ 'ಎ' ಪ್ರಮಾಣ ಪತ್ರ ಪಡೆದಿರುವ ಅಭ್ಯರ್ಥಿ.

ಉಪಖಂಡ (1) ಮತ್ತು (2) ರಲ್ಲಿ ಉಲ್ಲೇಖಿಸಿರುವ ಅಭ್ಯರ್ಥಿಗಳನ್ನು ಪರಿಗಣಿಸುವಾಗ ಮೊದಲು ಆದ್ಯತೆ ಬೆಳ್ಳಿಯ ಪದಕ ಪಡೆದವರಗಿಂತ ಚಿನ್ನದ ಪದಕ ಪಡೆದವರಿಗೆ ಹಾಗೂ ಕಂಚಿನ ಪದಕ ಪಡೆದವರಗಿಂತ ಬೆಳ್ಳಿಯ ಪದಕ ಪಡೆದವರಿಗೆ ಆಯಾ ಉಪಖಂಡಗಳಡಿ ನೀಡಲಾಗುವುದು.

ಅಲ್ಲದೆ ಉಪಖಂಡ (5) ರ ಅಭ್ಯರ್ಥಿಯು ಅಂದರೆ ಕೇವಲ ಎ ಪ್ರಮಾಣ ಪತ್ರ ಪಡೆದಿರುವವರು (ಆದ್ಯತೆ–8) ಕೌನ್ಸಲಿಂಗ ಹಾಗೂ ಪ್ರವೇಶಾತಿ ಸಮಯದಲ್ಲಿ ಎನ್ ಸಿ ಸಿ ವಿಶೇಷ ವರ್ಗದ ಪ್ರವೇಶವನ್ನು ಇತರ ಸಾಮಾನ್ಯ ಅರ್ಹತೆಯ ಪ್ರವೇಶದೊಂದಿಗೆ ಹಾಗೂ ಅವರ **ಮೆರಿಟ್ ಕ್ರಮಾಂಕದಡಿ** ಮೀಸಲಾತಿ ವರ್ಗದ ಪ್ರವೇಶವನ್ನು ಆಯ್ಕೆ ಮಾಡಲು ಅರ್ಹರಾಗಿರುತ್ತಾರೆ.

**ಸೂಚನೆ: ಅಭ್ಯರ್ಥಿಯು 8 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡುವ ಸಮಯದಲ್ಲಿ ಭಾಗವಹಿಸಿರುವ ವಿವಿಧ ಎನ್.ಸಿ.ಸಿ ಶಿಬಿರಗಳ ಬಗೆಗೆ ಆಯಾ ಶಾಲೆಗಳ ಮುಖ್ಯಸ್ಥರಿಂದ ನಮೂನೆಯನುಸಾರ ಪತ್ರವೊಂದನ್ನು ಪಡೆದು ಸಲ್ಲಿಸಬೇಕು.**

**ಬಿ) ಕ್ರೀಡೆ : ಅಭ್ಯರ್ಥಿಗಳ ಕೆಳಗಿನಂತೆ**

1. ಅಭ್ಯರ್ಥಿಯು ಕರ್ನಾಟಕದಲ್ಲಿ 7ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡುವ ಸಮಯದಲ್ಲಿ ದೇಶವನ್ನು ಪ್ರತಿನಿಧಿಸಿ ಶೆಡ್ಯೂಲ್–1ರಲ್ಲಿ ನಿರ್ದಿಷ್ಟಪಡಿಸಿರುವ ನಾಲ್ಕು ವರ್ಷಗಳ ಅವಧಿಯಲ್ಲಿ 'ಸೂಪರ್ ಎ–ಕ್ರೀಡೆ'ಗಳಲ್ಲಿ ಭಾಗವಹಿಸಿ ಪದಕಗಳು/ಕಪ್‌ಗಳನ್ನುಗೆದ್ದಿರುವ ಅಭ್ಯರ್ಥಿಗಳು.
2. ಅಭ್ಯರ್ಥಿಯು ಕರ್ನಾಟಕದಲ್ಲಿ 7 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡುವ ಸಮಯದಲ್ಲಿ ದೇಶವನ್ನು ಪ್ರತಿನಿಧಿಸಿ ಶೆಡ್ಯೂಲ್–1ರಲ್ಲಿ ನಿರ್ದಿಷ್ಟಪಡಿಸಿರುವ ನಾಲ್ಕು ವರ್ಷಗಳ ಅವಧಿಯಲ್ಲಿ 'ಎ–ಕ್ರೀಡೆ'ಗಳಲ್ಲಿ ಭಾಗವಹಿಸಿ ಪದಕಗಳು/ಕಪ್‌ಗಳನ್ನುಗೆದ್ದಿರುವ ಅಭ್ಯರ್ಥಿಗಳು.
3. ಅಭ್ಯರ್ಥಿಯು ಕರ್ನಾಟಕದಲ್ಲಿ 7 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡುವ ಸಮಯದಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ ಶೆಡ್ಯೂಲ್–1ರಲ್ಲಿ ನಿರ್ದಿಷ್ಟಪಡಿಸಿರುವ ನಾಲ್ಕು ವರ್ಷಗಳ ಅವಧಿಯಲ್ಲಿ 'ಬಿ–ಕ್ರೀಡೆ'ಗಳಲ್ಲಿ ಭಾಗವಹಿಸಿ ಪದಕಗಳು/ಕಪ್‌ಗಳ ವಿಜೇತರಾಗಿರುವ ಹಾಗೂ ಶೆಡ್ಯೂಲ್–1ರಲ್ಲಿ ನಿರ್ದಿಷ್ಟಪಡಿಸಿರುವ 'ಸೂಪರ್ ಎ–ಕ್ರೀಡೆ'ಗಳು ಅಥವಾ 'ಎ–ಕ್ರೀಡೆ'ಗಳಲ್ಲಿ ಭಾಗವಹಿಸಿರುವ ಅಭ್ಯರ್ಥಿಗಳು.

4. ಅಭ್ಯರ್ಥಿಯು ಕರ್ನಾಟಕದಲ್ಲಿ 7 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡುವ ಸಮಯದಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ ಶೆಡ್ಯೂಲ್–1ರಲ್ಲಿ ನಿರ್ದಿಷ್ಟಪಡಿಸಿರುವ ನಾಲ್ಕು ವರ್ಷಗಳ ಅವಧಿಯಲ್ಲಿ 'ಬಿ–ಕ್ರೀಡೆ'ಗಳಲ್ಲಿ ಭಾಗವಹಿಸಿ ಪದಕಗಳು/ಕಪ್‌ಗಳ ವಿಜೇತ ಅಭ್ಯರ್ಥಿಗಳು.
5. ಅಭ್ಯರ್ಥಿಯು ಕರ್ನಾಟಕದಲ್ಲಿ 7 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡುವ ಸಮಯದಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ ಶೆಡ್ಯೂಲ್–1ರಲ್ಲಿ ನಿರ್ದಿಷ್ಟಪಡಿಸಿರುವ ನಾಲ್ಕು ವರ್ಷಗಳ ಅವಧಿಯಲ್ಲಿ 'ಬಿ–ಕ್ರೀಡೆ'ಗಳಲ್ಲಿ ಪ್ರತಿನಿಧಿಸಿರುವ ಅಭ್ಯರ್ಥಿಗಳು.

ಸೂಪರ್ ಎ ಕ್ರೀಡೆಗಳಲ್ಲಿ ಚಿನ್ನ, ಬೆಳ್ಳಿ ಹಾಗೂ ಕಂಚಿನ ಪದಕಗಳನ್ನು ಪಡೆದ ಅಭ್ಯರ್ಥಿಗಳನ್ನು **ಮೊದಲು** ಪರಿಗಣಿಸಲಾಗುವುದು. ಎ ಕ್ರೀಡೆಗಳ ಪದಕ ವಿಜೇತರನ್ನು **ಎರಡನೆಯದಾಗಿ** ಪರಿಗಣಿಸಲಾಗುವುದು. ಬಿ ಕ್ರೀಡೆಗಳ ಪದಕ ವಿಜೇತರನ್ನು ಹಾಗೂ ಸೂಪರ್ ಎ ಅಥವಾ ಎ ಕ್ರೀಡೆಗಳಲ್ಲಿ ಭಾಗವಹಿಸಿರುವವರನ್ನು **ಮೂರನೆಯದಾಗಿ** ಪರಿಗಣಿಸಲಾಗುವುದು. ಬಿ ಕ್ರೀಡೆಗಳಲ್ಲಿ ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಪಡೆದ ಅಭ್ಯರ್ಥಿಗಳನ್ನು **ನಾಲ್ಕನೆಯದಾಗಿ** ಪರಿಗಣಿಸಲಾಗುವುದು. **ಪ್ರತಿಯೊಂದು ಗುಂಪಿನ ಕ್ರೀಡಾ ಅಭ್ಯರ್ಥಿಗಳ ನಡುವೆ ಕ್ರೀಡೆಗಳಲ್ಲಿ ಅಥವಾ ಆಟೋಟಗಳಲ್ಲಿ ಅಭ್ಯರ್ಥಿಗಳು ಗಳಿಸಿರುವ ಪದಕಗಳನ್ನು ಮತ್ತು ಪದಕಗಳ ಸಂಖ್ಯೆಯನ್ನೂ ಸಹ ಪರಿಗಣಿಸಲಾಗುವುದು. ಪದಕಗಳ ಸಂಖ್ಯೆ ಎಷ್ಟೇ ಇದ್ದರೂ ಬೆಳ್ಳಿಯ ಪದಕಕ್ಕಿಂತ ಚಿನ್ನದ ಪದಕಕ್ಕೆ ಹಾಗೂ ಕಂಚಿನ ಪದಕಕ್ಕಿಂತ ಬೆಳ್ಳಿಯ ಪದಕಕ್ಕೆ ಆದ್ಯತೆ ನೀಡಲಾಗುವುದು.**

ಕ್ರೀಡೆ ವರ್ಗದ ಮೀಸಲಾತಿಯಡಿ ಉಪಖಂಡ(1) ಅಭ್ಯರ್ಥಿಗಳಿಗೆ ಮೊದಲ ಆದ್ಯತೆ ಆನಂತರ ಉಪಖಂಡ(2)ರ ಅಭ್ಯರ್ಥಿಗಳಿಗೆ ಎರಡನೇ ಆದ್ಯತೆ, ಉಪಖಂಡ (3)ರ ಅಭ್ಯರ್ಥಿಗಳಿಗೆ ಮೂರನೇ ಆದ್ಯತೆ, ಉಪಖಂಡ(4)ರ ಅಭ್ಯರ್ಥಿಗಳಿಗೆ ನಾಲ್ಕನೇ ಆದ್ಯತೆ ಹಾಗೂ ಉಪಖಂಡ(5)ರ ಅಭ್ಯರ್ಥಿಗಳಿಗೆ ಕೊನೆಯ ಆದ್ಯತೆಯನ್ನು ನೀಡಲಾಗುವುದು.

ಅಲ್ಲದೆ ಉಪಖಂಡ (1), (2), (3) ಮತ್ತು (4)ರ ಅಭ್ಯರ್ಥಿಗಳನ್ನು ಪರಿಗಣಿಸುವಾಗ ಎಷ್ಟೇ ಸಂಖ್ಯೆಯ ಪದಕಗಳಿದ್ದರೂ ಬೆಳ್ಳಿಯ ಪದಕ ಪಡೆದವರಿಗಿಂತ ಚಿನ್ನದ ಪದಕ ಪಡೆದವರಿಗೆ ಹಾಗೂ ಕಂಚಿನ ಪದಕ ಪಡೆದವರಿಗಿಂತ ಬೆಳ್ಳಿಯ ಪದಕ ಪಡೆದವರಿಗೆ ಆಯಾ ಉಪಖಂಡಗಳಡಿ ಆದ್ಯತೆ ನೀಡಲಾಗುವುದು.

ಉಪಖಂಡ (5)ರ ಅಭ್ಯರ್ಥಿಗಳಿಗೆ ಅಂದರೆ ಕರ್ನಾಟಕ ರಾಜ್ಯವನ್ನು ಮಾತ್ರ ಪ್ರತಿನಿಧಿಸಿರುವವರು ಕೌನ್ಸೆಲಿಂಗ್ ಮತ್ತು ಪ್ರವೇಶಾತಿ ಸಮಯದಲ್ಲಿ ಕ್ರೀಡೆ ವಿಶೇಷ ವರ್ಗದ ಪ್ರವೇಶವನ್ನು ಇತರ ಸಾಮಾನ್ಯ ಅರ್ಹತೆಯ ಪ್ರವೇಶದೊಂದಿಗೆ ಹಾಗೂ ಅವರ **ಮೆರಿಟ್ ಕ್ರಮಾಂಕದಡಿ** ಮೀಸಲಾತಿ ವರ್ಗದ ಪ್ರವೇಶವನ್ನು ಆಯ್ಕೆ ಮಾಡಲು ಅರ್ಹರಾಗಿರುತ್ತಾರೆ.

**ಸೂಚನೆ:**

1. ಅಭ್ಯರ್ಥಿಯು ವಿಶೇಷ ವರ್ಗಗಳಡಿ ಪ್ರವೇಶ ಬಯಸಿದಲ್ಲಿ ಕಡ್ಡಾಯವಾಗಿ ರಾಷ್ಟ್ರೀಯ ಕ್ರೀಡಾಪಟುಗಳು ಒಳಗೊಂಡಂತೆ ಮೇಲಿನಂತೆ ಪ್ರಮಾಣ ಪತ್ರಗಳನ್ನು (1 ರಿಂದ 5) ಅರ್ಜಿಯೊಂದಿಗೆ ಸಲ್ಲಿಸಬೇಕು. ಒಂದು ವೇಳೆ ತಪ್ಪಿದಲ್ಲಿ ಅಭ್ಯರ್ಥಿಯು ಕ್ರೀಡಾ ಕೋಟಾದಡಿ ಆಯ್ಕೆಯಾಗಲು ಅರ್ಹರಾಗುವುದಿಲ್ಲ.
2. ಅಭ್ಯರ್ಥಿಯು 7 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡುವ ಅವಧಿಯಲ್ಲಿ ತಾನು ಭಾಗವಹಿಸಿದ್ದ ಕ್ರೀಡೆಗಳಿಗೆ ಸಂಬಂಧಿಸಿದಂತೆ ಪ್ರಮಾಣ ಪತ್ರವನ್ನು ಆಯಾ ಸಂಸ್ಥೆಯ ಮುಖ್ಯಸ್ಥರಿಂದ ಪಡೆದು ಸಲ್ಲಿಸಬೇಕು.

**ಸ್ಕೌಟ್ಸ್ ಮತ್ತು ಗೈಡ್ಸ್, ಯೋಧರು, ಮಾಜಿ ಯೋಧರು ಹಾಗೂ ಆಂಗ್ಲೋ–ಇಂಡಿಯನ್/ಹೈದರಾಬಾದ್ ಕರ್ನಾಟಕ ಅಂದರೆ ಈ ಕೆಳಗಿನ ಉಪ ಕಲಮುಗಳಾದ(ಸಿ), (ಡಿ), (ಇ) ಮತ್ತು (ಜಿ)ಗಳಡಿ ಬರುವವರು ಸಾಮಾನ್ಯ ಪ್ರವೇಶಾತಿ ಆಯ್ಕೆ ಪ್ರಕ್ರಿಯೆಯಲ್ಲಿ ಹಾಗೂ ಇತರೆ ಸಾಮಾನ್ಯ ಜೇಷ್ಠತಾ ಅರ್ಹತೆ ಮತ್ತು ಮೀಸಲಾತಿ ವರ್ಗದ ಅಭ್ಯರ್ಥಿಗಳ ಪ್ರವೇಶಾತಿ ಆಯ್ಕೆಯ ಸುತ್ತಿನಡಿಯಲ್ಲಿ ತಮ್ಮ ವಿಶೇಷ ವರ್ಗದ ಸೀಟುಗಳ ಆಯ್ಕೆಗೆ ತಮ್ಮ ಅಂಕ ಜೇಷ್ಠತೆಯ ಆಧಾರದ ಮೇಲೆ ಮಾತ್ರ ಆಯ್ಕೆಗೆ ಅವಕಾಶ ನೀಡಲಾಗುವುದು.**

ಸಿ) **ಸ್ಕೌಟ್ಸ್ ಮತ್ತು ಗೈಡ್‌ಗಳು:** ಅಭ್ಯರ್ಥಿಯು ಕರ್ನಾಟಕದಲ್ಲಿ 7 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡುವ ನಾಲ್ಕು ವರ್ಷಗಳ ಅವಧಿಯಲ್ಲಿ ಸ್ಕೌಟ್ಸ್/ಗೈಡ್ಸ್ ಆಗಿ 'ರಾಷ್ಟ್ರಪತಿ ಪ್ರಶಸ್ತಿ'ಯನ್ನು ಪಡೆದಿರಬೇಕು ಹಾಗೂ ಪ್ರಶಸ್ತಿ ಪ್ರಮಾಣಪತ್ರದ ಪ್ರತಿಯನ್ನು ಲಗತ್ತಿಸಿರಬೇಕು. ತಾತ್ಕಾಲಿಕ ಸ್ಕೌಟ್ಸ್ ಮತ್ತು ಗೈಡ್ಸ್ ಪ್ರಮಾಣ ಪತ್ರವನ್ನು ಪರಿಗಣಿಸಲಾಗುವುದಿಲ್ಲ.

ಡಿ) **ಸೇನಾ ಸಿಬ್ಬಂದಿ ಮಕ್ಕಳು:** ಸೇನಾ ಸಿಬ್ಬಂದಿಯ ಮಕ್ಕಳಿಗೆ ಸಂಬಂಧಪಟ್ಟಂತೆ ಸೇನಾ ಸಿಬ್ಬಂದಿಯೆಂದರೆ, ಸಿವಿಲ್ ಜಿ.ಟಿ.ಸಿ.ಓ.ವೈ.ಎಸ್.ಎ.ಎಸ್.ಸಿ.ಗೆ ಸೇರಿದ ಸಿಬ್ಬಂದಿ ಹಾಗೂ ಸಿವಿಲಿಯನ್ ಕ್ಲಾಸ್-III ಅಥವಾ ಕ್ಲಾಸ್ IV ಸರ್ಕಾರಿ ಸೇವಕರನ್ನೊಳಗೊಂಡಂತೆ ಮತ್ತು ಬಾರ್ಡರ್ ರೋಡ್ಸ್ ಆರ್ಗನೈಜೇಷನಲ್ ಸಿಬ್ಬಂದಿಯೂ ಒಳಗೊಂಡಿರುತ್ತಾರೆ (ಅಧಿಸೂಚನೆ ಸಂ.ಇಆ 189 ಟಿ.ಜಿ.ಎಲ್ 94 ಬೆಂಗಳೂರು, ದಿನಾಂಕ.29.07.1994) ಇದರ ಅಡಿಯಲ್ಲಿ ಅರ್ಹತೆಯನ್ನು ಕೋರುವ ಅಭ್ಯರ್ಥಿಯು ನಿಯಂತ್ರಣ ಕಛೇರಿ ನೀಡಿರುವ ನೇಮಕಾತಿ ಪ್ರಮಾಣ ಪತ್ರವನ್ನು ಸಲ್ಲಿಸಬೇಕು. ಆ ಪ್ರಮಾಣ ಪತ್ರದಲ್ಲಿ ಅಭ್ಯರ್ಥಿಯ ತಂದೆ/ತಾಯಿ ಕರ್ನಾಟಕದಲ್ಲಿ ಕಾರ್ಯನಿರ್ವಹಿಸಿರುವ ಅವಧಿಯಲ್ಲಿ ಸೂಚಿಸಿರಬೇಕು.

ಇ) **ಮಾಜಿ ಯೋಧರ ಮಕ್ಕಳು:** ಈ ಮೀಸಲಾತಿ ಅಡಿ ಬರುವ ಮಾಜಿ ಯೋಧರ ಮಗಳು/ಮಗ ಸಂಬಂಧಿತ ಜಿಲ್ಲೆಯ ಜಂಟಿ ನಿರ್ದೇಶಕರು/ಉಪನಿರ್ದೇಕರು ನೀಡಿರುವ ಪ್ರಮಾಣ ಪತ್ರವನ್ನು ಸಲ್ಲಿಸಬೇಕು. ಆ ಪ್ರಮಾಣ ಪತ್ರದಲ್ಲಿ ಪೋಷಕರ ಮನೆಯ ವಿಳಾಸವನ್ನು ತಿಳಿಸಿರಬೇಕು ಹಾಗೂ ಆ ಪ್ರಮಾಣ ಪತ್ರಕ್ಕೆ ನಿರ್ದೇಶಕರು, ಸೈನಿಕರು ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಬೆಂಗಳೂರು ಇದರ ನಿರ್ದೇಶಕರು ಪ್ರತಿ ಸಹಿ ಮಾಡಿರಬೇಕು. ಈ ಉಪಬಂಧದಡಿ ಬರುವ ಮಾಜಿ ಯೋಧರು ಸಿವಿಲ್ ಜಿಟಿ ಸಿಓವೈಎಸ್ ಎಎಸ್‌ಸಿ ಗೆ ಸೇರಿದ ಸಿಬ್ಬಂದಿ ಹಾಗೂ ಅವರು ದರ್ಜೆ–3 ಅಥವಾ ದರ್ಜೆ–4ರ ಸರ್ಕಾರಿ ಸೇವಕರಾಗಿರುತ್ತಾರೆ ಹಾಗೂ ಯುದ್ಧ ಸಮಯದಲ್ಲಿ ಸಂಪೂರ್ಣ ಅಂಗವಿಕಲರಾಗಿರುತ್ತಾರೆ ಅಥವಾ ಮರಣ ಹೊಂದಿರುತ್ತಾರೆ.

ಎಫ್) **ಅಂಗವಿಕಲ ವಿದ್ಯಾರ್ಥಿಗಳು:** ಶೇ.40ಕ್ಕಿಂತ ಹೆಚ್ಚಿನ ದೈಹಿಕ ಅಂಗವಿಕಲತೆ ಹೊಂದಿರುವ ಅಭ್ಯರ್ಥಿಗಳು ಕರ್ನಾಟಕ ರಾಜ್ಯದ ಸರ್ಕಾರಿ ಆಸ್ಪತ್ರೆಯ ಸಂಬಂಧಪಟ್ಟ ಅಂಗವಿಕಲತೆಯ ವಿಷಯದಲ್ಲಿ ಸಕ್ಷಮರಾದ ವೈದ್ಯರಿಂದ ವೈದ್ಯಕೀಯ ಪ್ರಮಾಣ ಪತ್ರ ಪಡೆದಿರಬೇಕು.

ಜಿ) **ಆಂಗ್ಲೋ ಇಂಡಿಯನ್ ಸಮುದಾಯಕ್ಕೆ ಸೇರಿದ ಅಭ್ಯರ್ಥಿಗಳು:** ಕರ್ನಾಟಕ ರಾಜ್ಯದ ನೋಂದಾಯಿತ ಆಂಗ್ಲೋ ಇಂಡಿಯನ್ ಸಮುದಾಯ ಸಂಸ್ಥೆಯಿಂದ ವಿತರಿಸಿದ ಹಾಗೂ ಸರ್ಕಾರವು ನಾಮನಿರ್ದೇಶಿಸಿದ ಆಂಗ್ಲೋ ಇಂಡಿಯನ್ ಶಾಸಕರಿಂದ ಪ್ರತಿ ಸಹಿ ಮಾಡಲಾದ ಪ್ರಮಾಣ ಪತ್ರದ ಪ್ರತಿಯನ್ನು ಲಗತ್ತಿಸಬೇಕು. ಇಲ್ಲವಾದಲ್ಲಿ ಅವರನ್ನು ಈ ಸಮುದಾಯದ ಪ್ರವರ್ಗದಡಿಯಲ್ಲಿ ಪ್ರವೇಶಾತಿಗೆ ಪರಿಗಣಿಸಲಾಗುವುದಿಲ್ಲ.

**ಸೂಚನೆ: ವಿಶೇಷ ಪ್ರವರ್ಗಗಳಾದ ಎನ್‌ಸಿಸಿ, ಕ್ರೀಡೆ, ಸ್ಕೌಟ್ಸ್/ಗೈಡ್, ಯೋಧರು, ಮಾಜಿ ಯೋಧರು, ಆಂಗ್ಲೋ ಇಂಡಿಯನ್, ಅಂಗವಿಕಲ ಮೀಸಲಾತಿ ಬಯಸುವ ಅಭ್ಯರ್ಥಿಗಳು ದಿ:05.10.2020 ರಂದು ಬೆಳಗ್ಗೆ 10.00 ಗಂಟೆಗೆ ಕುಲಸಚಿವರ ಕಾರ್ಯಾಲಯ, ತೋ.ವಿ.ವಿ., ಬಾಗಲಕೋಟದಲ್ಲಿ ಮೂಲದಾಖಲಾತಿಗಳ ಪರಿಶೀಲನೆ ಮಾಡಿಸಿಕೊಳ್ಳುವುದು ಕಡ್ಡಾಯ.**

ಎಚ್) **ಕೃಷಿ ಕೋಟಾದಡಿ ಪ್ರವೇಶ ಬಯಸುವ ಅಭ್ಯರ್ಥಿಗಳು :** ರೈತರ ಹಾಗೂ ಕೃಷಿ ಕಾರ್ಮಿಕರ ಮಕ್ಕಳಿಗೆ ಸರ್ಕಾರಿ ಆದೇಶದಂತೆ ಶೇ 40 ರಷ್ಟು ಮೀಸಲಾತಿ ನೀಡಲಾಗುವುದು. ಕೃಷಿ ಕೋಟಾದಡಿ ಪ್ರವೇಶ ಬಯಸುವ ಅಭ್ಯರ್ಥಿಗಳು ಮುಖ್ಯವಾಗಿ ಈ ಕೆಳಕಂಡ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ತಹಶೀಲ್ದಾರ/ಅಧಿಕಾರಿಗಳಿಂದ ಪಡೆದು ಲಗತ್ತಿಸುವುದು. ಈ ಕೆಳಗಿನ ನಮೂನೆಗಳನ್ನು **ಅನುಬಂಧ–2** ರಲ್ಲಿ ನೀಡಲಾಗಿದೆ

ಅ) ವ್ಯವಸಾಯಗಾರರ ದೃಢೀಕರಣ ಪ್ರಮಾಣ ಪತ್ರ (ತಹಶೀಲ್ದಾರರಿಂದ ಪಡೆದಿರಬೇಕು)
ಆ) ಕೃಷಿ ಆದಾಯದ ಪ್ರಮಾಣ ಪತ್ರ (ತಹಶೀಲ್ದಾರರಿಂದ ದೃಢಿಕರಿಸಿರಬೇಕು)
ಇ) ಅವಿಭಾಜ್ಯ ಕುಟುಂಬವಾದಲ್ಲಿ ವಂಶ ವೃಕ್ಷ ಪ್ರಮಾಣ ಪತ್ರ (ತಹಶೀಲ್ದಾರರಿಂದ ದೃಢಿಕರಿಸಿರಬೇಕು)
ಈ) ವೇತನ ದೃಢೀಕರಣ ಪ್ರಮಾಣ ಪತ್ರ (ವ್ಯವಸಾಯದ ಜೊತೆಗೆ ನೌಕರಿಯಿದ್ದಲ್ಲಿ)
ಉ) ಖಾಸಗಿ ವೃತ್ತಿಯಿಂದ ಆದಾಯ ಪತ್ರ (ವ್ಯವಸಾಯದ ಜೊತೆಗೆ ಸ್ವಂತ ವ್ಯವಹಾರವಿದ್ದಲ್ಲಿ)

ಊ) ಅಫಿಡವಿಟ್ 50 ರೂ ಛಾಪಾಕಾಗದದಲ್ಲಿ (ಕೃಷಿ ಆದಾಯದೊಂದಿಗೆ ನೌಕರಿ/ಖಾಸಗಿ ವೃತ್ತಿ ಆದಾಯ ಹೊಂದಿದವರು ನೀಡುವುದು) (First party will be candidate & second party will be university)

**ಅಭ್ಯರ್ಥಿಗಳಿಗೆ ಸೂಚನೆಗಳು:**

1. ಅಭ್ಯರ್ಥಿಯು ತನ್ನ ಅರ್ಜಿಯಲ್ಲಿ ಒದಗಿಸಿರುವ ಮಾಹಿತಿ/ವಿವರಗಳೇ ಅಂತಿಮ.
2. ಅಭ್ಯರ್ಥಿಯು/ಪೋಷಕರು ತಮ್ಮ ಅರ್ಜಿ ನಮೂನೆಯಲ್ಲಿ ಅಥವಾ ಸಲ್ಲಿಸಿರುವ ಇತರೆ ಯಾವುದೇ ದಾಖಲೆಗಳಲ್ಲಿ ನೀಡಿರುವ ಮಾಹಿತಿ ತಪ್ಪಾಗಿದೆ ಎಂದು ಕಂಡು ಬಂದಲ್ಲಿ ಅಂತಹ ಅಭ್ಯರ್ಥಿಯ ಪ್ರವೇಶವನ್ನು ಕೋರ್ಸ್‌ನ ಅವಧಿಯ ಯಾವುದೇ ಸಮಯಲ್ಲಾದರೂ ಅಥವಾ ಡಿಪ್ಲೋಮಾ ಪಡೆದ ನಂತರವೂ ರದ್ದುಗೊಳಿಸುವ ಹಾಗೂ ಕಾನೂನು ಕ್ರಮ ಕೈಗೊಳ್ಳುವ ಅಧಿಕಾರ ವಿಶ್ವವಿದ್ಯಾಲಯ ಹೊಂದಿದೆ.
3. ಸರ್ಕಾರಿ ಆದೇಶ ಸಂ: SWD 225 BCA 2000, ದಿನಾಂಕ:30.03.2002 ರನ್ವಯ ಹಾಗೂ ಕಾಲಕಾಲಕ್ಕೆ ತಿದ್ದುಪಡಿಗೊಳಿಸಿದ ಮೇರೆಗೆ (ಹೊಸ ಸಮಗ್ರ ಮೇಲುಸ್ತರ ಕಾರ್ಯ ನೀತಿ) ಕೆಳಗೆ ಸೂಚಿಸಲಾದ ವಿದ್ಯಾರ್ಥಿಗಳು, 2ಎ, 2ಬಿ, 3ಎ ಮತ್ತು 3ಬಿ ಅಡಿಯಲ್ಲಿ ಪ್ರವೇಶಾತಿ ಪಡೆಯಲು ಅರ್ಹರಾಗಿರುವುದಿಲ್ಲ. ಮೇಲಿನ ಸರ್ಕಾರಿ ಆದೇಶದ ಐಟಂ 1ರಲ್ಲಿ ಸೂಚಿಸಲಾದವರ ಮಗ/ಮಗಳು

- ಅಭ್ಯರ್ಥಿ ಮತ್ತು ಪೋಷಕರು/ಪಾಲಕರು ಯಾರಾದರೊಬ್ಬರು ಗುಂಪು ಎ (52650 ರಿಂದ 97100) ಅಥವಾ ಗುಂಪು ಬಿ ಅಧಿಕಾರಿಯಾಗಿ ಸರ್ಕಾರಿ ಸೇವೆಯಲ್ಲಿದ್ದರೆ ಅಥವಾ ಸಮಾನಾಂತರ ಹುದ್ದೆಯನ್ನು ಸಾರ್ವಜನಿಕ ಕ್ಷೇತ್ರ ಸಂಸ್ಥೆಯಲ್ಲಿ ಅಥವಾ ಖಾಸಗೀ ಉದ್ಯಮ/ಸಂಸ್ಥೆಯಲ್ಲಿ ತತ್ಸಮಾನ ಹುದ್ದೆಯಲ್ಲಿದ್ದು ಗ್ರೂಪ್ 'ಬಿ' ಅಧಿಕಾರಿಗಿಂತ ಕಡಿಮೆ ಇಲ್ಲದಂತೆ (ವೇತನ ಶ್ರೇಣಿ. ರೂ.40900 ರಿಂದ 78200) ವೇತನ ಪಡೆಯುತ್ತಿದ್ದಲ್ಲಿ.
- ಅಭ್ಯರ್ಥಿ ಮತ್ತು ಅವನ/ಅವಳ ತಂದೆ/ತಾಯಿ /ಪಾಲಕರು ಒಟ್ಟು ವಾರ್ಷಿಕ ಆದಾಯ 8 ಲಕ್ಷಕ್ಕಿಂತ ಹೆಚ್ಚಾಗಿದ್ದರೆ.
- ಅಭ್ಯರ್ಥಿ ಅಥವಾ ಅವನ/ಅವಳ ತಂದೆ/ತಾಯಿ / ಪಾಲಕರು ಕರ್ನಾಟಕ ಭೂಸುಧಾರಣೆ ಅಧಿನಿಯಮ 1961ರಲ್ಲಿ ಸೂಚಿಸಿದಂತೆ 10 ಘಟಕಕ್ಕಿಂತ ಹೆಚ್ಚಿನ ಕೃಷಿ ಭೂಮಿಯನ್ನು ಹೊಂದಿದ್ದರೆ ಮತ್ತು 20 ಎಕರೆಗಿಂತ ಹೆಚ್ಚಿನ ತೋಟವನ್ನು ಹೊಂದಿದ್ದರೆ.

4. ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳು(ಪ್ರವರ್ಗ–1,2ಎ,2ಬಿ,3ಎ,3ಬಿ) ಇವುಗಳಡಿಯಲ್ಲಿ ಪ್ರವೇಶಾತಿ ಬಯಸುವ ವಿದ್ಯಾರ್ಥಿಗಳು ನಿಗದಿತ ಸಂಬಂಧಪಟ್ಟ ಚಾಲ್ತಿಯಲ್ಲಿರುವ ನಮೂನೆಗಳಲ್ಲಿ ಸೂಕ್ತವಾದ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು. ಮೀಸಲಾತಿ ಸೌಲಭ್ಯವನ್ನು ಬಯಸುವ ವಿದ್ಯಾರ್ಥಿಗಳು ಜಾತಿ/ಆದಾಯ ಪ್ರಮಾಣ ಪತ್ರ ಸಹ ಸಲ್ಲಿಸಬೇಕು.

5. ವಿಶೇಷ ಪ್ರವರ್ಗಗಳಡಿಯಲ್ಲಿ ಎಂದರೆ ಎನ್.ಸಿ.ಸಿ/ಕ್ರೀಡೆಗಳು/ ಸ್ಕೌಟ್ಸ್ ಮತ್ತು ಗೈಡ್/ರಕ್ಷಣಾ ಸೇವೆ/ ಮಾಜಿ ಯೋಧರು/ ಆಂಗ್ಲೋ ಇಂಡಿಯನ್ಸ್/ ದೈಹಿಕ ಅಂಗವಿಕಲರು/ ಹೈದರಾಬಾದ್ ಕರ್ನಾಟಕ ಮೀಸಲಾತಿ/ಕೃಷಿಕರ ಕೋಟಾದಡಿಯಲ್ಲಿ ಮೀಸಲಾತಿ ಬಯಸುವ ಅಭ್ಯರ್ಥಿಗಳು ಸೂಕ್ತ ದಾಖಲೆ ಪತ್ರಗಳನ್ನು ಸಲ್ಲಿಸಬೇಕು. ಇವುಗಳನ್ನು ಸೂಕ್ತ ಪ್ರಾಧಿಕಾರದವರಿಂದ ಪರಿಶೀಲನೆಗೆ ಒಳಪಡಿಸಲಾಗುವುದು. ದೈಹಿಕ ವಿಕಲತೆ ಪ್ರವರ್ಗದಡಿಯಲ್ಲಿನ ಅಭ್ಯರ್ಥಿಗಳು ಶೇ.40ಕ್ಕಿಂತ ಕಡಿಮೆ ಅಂಗವಿಕಲತೆಯನ್ನು ಹೊಂದಿದ್ದರೆ ಅವರನ್ನು ಆಯ್ಕೆ ಮಾಡಲಾಗುವುದಿಲ್ಲ.

6. ಗ್ರಾಮೀಣ ಪ್ರವರ್ಗದಡಿಯಲ್ಲಿ ಪ್ರವೇಶಾತಿ ಬಯಸುವ ಅಭ್ಯರ್ಥಿಯ ಚಾಲ್ತಿಯಲ್ಲಿರುವ ನಿಗದಿತ ನಮೂನೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಸಹಿ ಮಾಡಿ, ದಿನಾಂಕ ನಮೂದಿಸಿ, ಕಛೇರಿ ಮೊಹರು ಹಾಕಿದ ವ್ಯಾಸಂಗ ಪ್ರಮಾಣಪತ್ರವನ್ನು ಸಲ್ಲಿಸಬೇಕು. ಮೇಲುಸ್ತರದ ಅಡಿಯಲ್ಲಿ ಬರುವ ವಿದ್ಯಾರ್ಥಿಗಳ ಪೋಷಕರು ಗ್ರಾಮೀಣ ವರ್ಗದಡಿ ಮೀಸಲಾತಿಯನ್ನು ಪಡೆಯಲು ಅರ್ಹರಾಗಿರುವುದಿಲ್ಲ.
7. ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ನಿಗದಿತ ನಮೂನೆಯಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಬೇಕು ಹಾಗೂ ಆ ಪ್ರಮಾಣ ಪತ್ರಕ್ಕೆ ಸಂಬಂಧಿಸಿದ ಅಧಿಕಾರಿಗಳು ದಿನಾಂಕ ಹಾಗೂ ಮೊಹರಿನೊಂದಿಗೆ ಸಹಿ ಮಾಡಿರಬೇಕು. ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಹಿಯನ್ನು ಕಡ್ಡಾಯವಾಗಿ ಮಾಡಿಸಿ ಅರ್ಜಿಯೊಂದಿಗೆ ಲಗತ್ತಿಸುವುದು.

8. ಈ ಮೇಲೆ ಉಲ್ಲೇಖಿಸಿದ ಲಂಬ ಮೀಸಲಾತಿಗಳಲ್ಲಿ ಅರ್ಹ ಅಭ್ಯರ್ಥಿಗಳು ಇರದೆ ಪ್ರವೇಶಾತಿ ಭರ್ತಿಯಾಗದಿದ್ದಲ್ಲಿ ಅಂತಹ ಖಾಲಿ ಸೀಟುಗಳನ್ನು ಸಾಮಾನ್ಯ ಜೇಷ್ಠತಾ ಅರ್ಹತೆಯ ವರ್ಗಕ್ಕೆ ಪರಿವರ್ತಿಸಲಾಗುವುದು.
9. **ಕರ್ನಾಟಕವನ್ನು ಹೊರತುಪಡಿಸಿ ಇತರ ರಾಜ್ಯಗಳ ಅಭ್ಯರ್ಥಿಗಳು ವಿಶ್ವವಿದ್ಯಾಲಯದಲ್ಲಿ ಡಿಪ್ಲೋಮಾ ಕಾರ್ಯಕ್ರಮಗಳಿಗೆ ನೇರವಾಗಿ ಪ್ರವೇಶ ಪಡೆಯಲು ಅರ್ಹರಿರುವುದಿಲ್ಲ.**

**ಟಿಪ್ಪಣಿ** : ಲಂಬ ಮೀಸಲಾತಿಯನ್ವಯ ಆಯಾ ವರ್ಗಗಳಲ್ಲಿ ಅರ್ಹ ಅಭ್ಯರ್ಥಿಗಳ ಕೊರತೆಯಿಂದಾಗಿ ಸೀಟುಗಳು ಭರ್ತಿಯಾಗದೇ ಉಳಿದಲ್ಲಿ ಇಂತಹ ಮೀಸಲಾತಿ ಸೀಟುಗಳನ್ನು "ಸಾಮಾನ್ಯ ವರ್ಗ" ದ ಸೀಟುಗಳೆಂದು ಪರಿಗಣಿಸಿ, ಸಾಮಾನ್ಯ ವರ್ಗದಲ್ಲಿನ ಅಭ್ಯರ್ಥಿಗಳಿಗೆ ಮೆರಿಟ್ ಆಧಾರದಲ್ಲಿ ಪ್ರವೇಶ ನೀಡಲಾಗುವುದು.

**ಪ್ರವೇಶಕ್ಕೆ ಅರ್ಜಿ ಮತ್ತು ವಿವರಣಾ ಪುಸ್ತಕ :**

ಅರ್ಜಿ ನಮೂನೆ ಮತ್ತು ಬ್ಯಾಂಕ್ ಚಲನ್, ವಿವರಣಾ ಪುಸ್ತಕಗಳನ್ನು ವಿಶ್ವವಿದ್ಯಾಲಯದ ಅಂತರ್ಜಾಲದಲ್ಲಿ ಪಡೆದುಕೊಳ್ಳುವುದು. ಅನ್ವಯವಾಗುವಂತೆ ನಿಗದಿತ ಅರ್ಜಿ ಶುಲ್ಕವನ್ನು **ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ** ಯಾವುದೇ ಶಾಖೆಯಲ್ಲಿ ಪಾವತಿಸುವುದು. ಈ ರೀತಿ ಶುಲ್ಕ ಪಾವತಿಸಿದ ರಶೀದಿಯನ್ನು (**ವಿಶ್ವವಿದ್ಯಾಲಯದ ಚಲನ್ ಪ್ರತಿ**) ಅರ್ಜಿ ಜೊತೆಗೆ ಕಡ್ಡಾಯವಾಗಿ ಲಗತ್ತಿಸುವುದು.

**ಶುಲ್ಕದ ವಿವರ**

1) ಸಾಮಾನ್ಯ ಅಭ್ಯರ್ಥಿಗಳಿಗೆ – 500=00 (+ 60 ರೂ ಬ್ಯಾಂಕಿನ ವೆಚ್ಚ)

2) ಪ.ಜಾ/ಪ.ಪಂ/ಪ್ರವರ್ಗ–1 ಅಭ್ಯರ್ಥಿಗಳಿಗೆ – 250=00 (+ 60 ರೂ ಬ್ಯಾಂಕಿನ ವೆಚ್ಚ)

* ಡಿ.ಡಿ/ಐಪಿಒ/ಚೆಕ್‌ಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.

ಅರ್ಜಿ ನಮೂನೆಯನ್ನು ದಿನಾಂಕ: **01.09.2020** ರಿಂದ **30.09.2020** ರವರೆಗೆ ವಿಶ್ವವಿದ್ಯಾಲಯದ ಅಂತರ್ಜಾಲ www.uhsbagalkot.edu.in ದಿಂದ ಪಡೆಯಬಹುದು.

**ಸೂಚನೆ :** ಅಂತರ್ಜಾಲ ಮೂಲಕ ಅರ್ಜಿ ಹಾಗೂ ವಿವರಣಾ ಪುಸ್ತಕವನ್ನು ಪಡೆದುಕೊಂಡು, ಭರ್ತಿಮಾಡಿದ ಅರ್ಜಿ ಜೊತೆಗೆ ಮೇಲೆ ತಿಳಿಸಿದ ನಿಗದಿತ ಅರ್ಜಿ ಶುಲ್ಕದ ಚಲನ್‌ನ್ನು ಲಗತ್ತಿಸಬೇಕು. ಚಲನ್ ಲಗತ್ತಿಸದೇ ಇರುವ ಹಾಗೂ ಅಪೂರ್ಣ ಅರ್ಜಿಗಳನ್ನು ಯಾವುದೇ ಮುನ್ಸೂಚನೆ ಇಲ್ಲದೇ ತಿರಸ್ಕರಿಸಲಾಗುವುದು.

ಡಿಪ್ಲೋಮಾ (ತೋಟಗಾರಿಕೆ) ಎರಡು ವರ್ಷದ ಕೋರ್ಸ್‌ಗಾಗಿ **ಅರಭಾವಿ ಮತ್ತು ಕೋಲಾರ(ಹೊಗಳಗೆರೆ)** ಪ್ರವೇಶ ಬಯಸುವ ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಯನ್ನು ವಿಶ್ವವಿದ್ಯಾಲಯದ ಚಲನ್ ಪ್ರತಿ ಮತ್ತು ಎಲ್ಲಾ ಅವಶ್ಯಕ ದಾಖಲೆಗಳೊಂದಿಗೆ **ಡೀನ್ ಸ್ನಾತಕೋತ್ತರ, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಉದ್ಯಾನಗಿರಿ, ನವನಗರ, ಬಾಗಲಕೋಟ–587104** ಇವರಿಗೆ **ಕೊನೆಯ ದಿನಾಂಕ :30.09.2020 ರಂದು 5.00 ಘಂಟೆಯ** ಒಳಗಾಗಿ ತಲುಪುವಂತೆ ಸಲ್ಲಿಸುವುದು. ತಡವಾಗಿ ಬಂದ ಹಾಗೂ ಅಪೂರ್ಣ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವದಿಲ್ಲ.

ಈ ಕೋರ್ಸಿನ ಪ್ರವೇಶಗಳು ಸರ್ಕಾರದ ಆದೇಶಗಳ/ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕಾಯ್ದೆ/ ಅಧಿನಿಯಮಗಳಿಗೆ ಒಳಪಟ್ಟಿರುತ್ತದೆ.

**ಸೂಚನೆ :**
1) ಪ್ರತಿ ಕೇಂದ್ರದಲ್ಲಿ ಕನಿಷ್ಠ 20 ವಿದ್ಯಾರ್ಥಿಗಳು ಪ್ರವೇಶವನ್ನು ಪಡೆದರೆ ಮಾತ್ರ ಆ ಕೇಂದ್ರದಲ್ಲಿ ಸಂಬಂಧಪಟ್ಟ ಕೋರ್ಸ್‌ನ್ನು ಪ್ರಾರಂಭಿಸಲಾಗುವುದು.
2) ಎರಡು ಕೇಂದ್ರಗಳಿಗಾಗಿ ಒಂದೇ ಅರ್ಜಿಯನ್ನು ಸಲ್ಲಿಸತಕ್ಕದ್ದು.
3) ಎರಡು ಕೇಂದ್ರಗಳಿಗಾಗಿ ಒಂದೇ ಮೆರಿಟ್ ಪಟ್ಟಿ ಆಧರಿಸಿ ಸೀಟು ಹಂಚಿಕೆ ಮಾಡಲಾಗುವುದು.

**ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ : 30.09.2020**

ಪ್ರವೇಶ ವಿಧಾನ :

1) **ಡಿಪ್ಲೋಮಾ (ತೋಟಗಾರಿಕೆ) ಕೋರ್ಸಿಗೆ ಎಸ್.ಎಸ್.ಎಲ್.ಸಿ./ತತ್ಸಮಾನ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಮೆರಿಟ್ ಹಾಗೂ ರೋಸ್ಟರ್ ಪದ್ದತಿ ಆಧರಿಸಿ ಅಭ್ಯರ್ಥಿ ಆಯ್ಕೆ ಮಾಡಿರುವ ಮಹಾವಿದ್ಯಾಲಯದ ಆದ್ಯತೆಯನ್ನು ಪರಿಗಣಿಸಿ ಸೀಟು ಹಂಚಿಕೆ ಮಾಡಲಾಗುವುದು. ಒಂದೇ ಮೀಸಲಾತಿ ಪ್ರವರ್ಗದಲ್ಲಿ ಇಬ್ಬರು ಅಥವಾ ಅದಕ್ಕಿಂತ ಹೆಚ್ಚಿನ ಅರ್ಹ ಅಭ್ಯರ್ಥಿಗಳ ಮೆರಿಟ್ ಸಮಾನವಾಗಿದ್ದಲ್ಲಿ ಅವರ ಜನ್ಮದಿನಾಂಕದ ಹಿರಿತನ ಆಧರಿಸಿ ಸೀಟು ಹಂಚಿಕೆ ಮಾಡಲಾಗುವುದು.**
2) **ಆಯ್ಕೆಯಾದ ಅಭ್ಯರ್ಥಿಯು ಸೀಟು ಹಂಚಿಕೆ ಮಾಡಲಾದ ಮಹಾವಿದ್ಯಾಲಯದಲ್ಲಿ ನಿಗದಿತ ದಿನಾಂಕದೊಳಗೆ ಹಾಜರಾಗಿ ಮೂಲದಾಖಲಾತಿಗಳ ಪರಿಶೀಲನೆ ಮಾಡಿಸಿಕೊಂಡು, ನಿಗದಿತ ಶುಲ್ಕ ಭರಿಸಿ ಪ್ರವೇಶವನ್ನು ಪಡೆಯುವುದು ಕಡ್ಡಾಯ. ಇಲ್ಲದಿದ್ದರೆ ಸದರಿ ಅಭ್ಯರ್ಥಿಯ ಅಭ್ಯರ್ಥಿತನವು ರದ್ದುಗೊಳ್ಳುವುದು**

3) ಅಭ್ಯರ್ಥಿ ಅರ್ಜಿಯಲ್ಲಿ ನಮೂದಿಸಿದಂತೆ ಪ್ರಥಮ ಆದ್ಯತೆ (Preference) ನೀಡಿದ ಮಹಾವಿದ್ಯಾಲಯದಲ್ಲಿ ಸೀಟು ಹಂಚಿಕೆಯಾಗಿದ್ದಲ್ಲಿ, ಸದರಿ ಅಭ್ಯರ್ಥಿಯನ್ನು ನಂತರ ಆಯ್ಕೆ ಪ್ರಕ್ರಿಯೆಯಲ್ಲಿ ಪರಿಗಣಿಸಲಾಗುವುದಿಲ್ಲ.

4) ಮೊದಲನೇಯ ಆಯ್ಕೆ ಪಟ್ಟಿಯಲ್ಲಿ ದ್ವಿತೀಯ ಆದ್ಯತೆ (Preference) ನೀಡಿದ ಮಹಾವಿದ್ಯಾಲಯದಲ್ಲಿ ಸೀಟು ಹಂಚಿಕೆಯಾಗಿದ್ದಲ್ಲಿ, ಸದರಿ ವಿದ್ಯಾರ್ಥಿಯು ಕಡ್ಡಾಯವಾಗಿ ಸಂಬಂಧಪಟ್ಟ ಮಹಾವಿದ್ಯಾಲಯಕ್ಕೆ ನಿಗದಿತ ದಿನಾಂಕದೊಳಗೆ ಹಾಜರಾಗಿ ಮೂಲದಾಖಲಾತಿಗಳ ಪರಿಶೀಲನೆ ಮಾಡಿಸಿಕೊಂಡು, ನಿಗದಿತ ಶುಲ್ಕ ಭರಿಸಿ ಪ್ರವೇಶವನ್ನು ಪಡೆಯುವುದು, ತಪ್ಪಿದ್ದಲ್ಲಿ ಅವರ ಅಭ್ಯರ್ಥಿತನವನ್ನು ಮುಂದಿನ ಸುತ್ತಿನ ಆಯ್ಕೆ ಪ್ರಕ್ರಿಯೆಯಲ್ಲಿ ಪರಿಗಣಿಸಲಾಗುವುದಿಲ್ಲ.

**ಡಿಪ್ಲೋಮಾ (ತೋಟಗಾರಿಕೆ) ಕೋರ್ಸ್‌ಗೆ ಶುಲ್ಕದ ವಿವರ :**

ಆಯ್ಕೆಯಾದ ಅಭ್ಯರ್ಥಿಗಳು ಈ ಕೆಳಗಿನಂತೆ ನಿಗದಿಪಡಿಸಿದ ಶುಲ್ಕವನ್ನು ಹಂಚಿಕೆ ಮಾಡಲಾದ ಮಹಾವಿದ್ಯಾಲಯಕ್ಕೆ ಹಾಜರಾತಿ ಮಾಡಿಕೊಳ್ಳುವ ದಿನದಂದು ಪಾವತಿ ಮಾಡಿ ಸೀಟ್ ಪಡೆಯತಕ್ಕದ್ದು. ಒಂದು ವೇಳೆ ಹಾಜರಾತಿ ಸಮಯದಲ್ಲಿ ನಿಗದಿತ ಶುಲ್ಕ ತುಂಬದಿದ್ದಲ್ಲಿ ಅವರ ಸೀಟನ್ನು ರದ್ದುಪಡಿಸಲಾಗುವುದು ಹಾಗೂ ನಂತರದ ಅರ್ಹ ಅಭ್ಯರ್ಥಿಗಳಿಗೆ ಸದರಿ ಸೀಟನ್ನು ಹಂಚಿಕೆ ಮಾಡಲಾಗುವುದು.

ಡಿಪ್ಲೋಮಾ (ತೋಟಗಾರಿಕೆ) ಎರಡು ವರ್ಷದ ಕೋರ್ಸ್‌ಗೆ ಆಯ್ಕೆಯಾದ ಅಭ್ಯರ್ಥಿಯು ಸಂದಾಯ ಮಾಡಬೇಕಾದ ಶುಲ್ಕದ ವಿವರ ಈ ಕೆಳಗಿನಂತಿದೆ.

**ಪ್ರಥಮ ವರ್ಷ :**

| ಕ್ರಸಂ | ವಿವರಗಳು | ಪ್ರಥಮ ಷಾಣ್ಮಾಸಿಕ | | | ದ್ವಿತೀಯ ಷಾಣ್ಮಾಸಿಕ | | |
|---|---|---|---|---|---|---|---|
| | | GM/ Others | SC/ST | Cat – I | GM /Others | SC/ST | Cat –I |
| 1 | ನೋಂದಣಿ ಶುಲ್ಕ | 125 | ***125** | 125 | 125 | ***125** | 125 |
| 2 | ಬೋಧನಾ ಶುಲ್ಕ | 700 | ***700** | **700 | 890 | ***890** | **890 |
| 3 | ಪ್ರಯೋಗಾಲಯ ಶುಲ್ಕ | 210 | ***210** | **210 | 400 | ***400** | **400 |
| 4 | ಪ್ರವೇಶ ಶುಲ್ಕ | 210 | ***210** | **210 | 0 | 0 | 0 |
| 5 | ಗ್ರಂಥಾಲಯ ಶುಲ್ಕ | 210 | ***210** | **210 | 0 | 0 | 0 |
| 6 | ಕ್ರೀಡಾ ಶುಲ್ಕ | 510 | ***510** | **510 | 0 | 0 | 0 |
| 7 | ಶೈಕ್ಷಣಿಕ ಮಾಹಿತಿ ಮತ್ತು ನಿಭಂದನಾ ಶುಲ್ಕ | 110 | 110 | 110 | 0 | 0 | 0 |
| 8 | ಮಾಸಪತ್ರಿಕೆ ಶುಲ್ಕ | 0 | 0 | 0 | 105 | 105 | 105 |
| 9 | ಚಿಕಿತ್ಸಾ ಶುಲ್ಕ | 100 | ***100** | 100 | 0 | 0 | 0 |
| 10 | ಸಹಕಾರ/ಸಂಸ್ಥೆ ಶುಲ್ಕ | 100 | 100 | 100 | 0 | 0 | 0 |
| 11 | ವಿದ್ಯಾರ್ಥಿ ಕಲ್ಯಾಣ ನಿಧಿ | 100 | 100 | 100 | 0 | 0 | 0 |
| 12 | ಎಚ್ಚರಿಕೆ ಹಣ (Caution money) | 1005 | 1005 | 1005 | 0 | 0 | 0 |
| 13 | ಪ್ರವಾಸ ಶುಲ್ಕ | 510 | 510 | 510 | 510 | ***510** | 510 |
| 14 | ಪರೀಕ್ಷಾ ಶುಲ್ಕ | 210 | ***210** | **210 | 400 | ***400** | **400 |
| 15 | ಗುರುತಿನ ಚೀಟಿ ಶುಲ್ಕ | 100 | 100 | 100 | 0 | 0 | 0 |
| 16 | ದಾಖಲಾತಿ ಶುಲ್ಕ | 100 | 100 | 100 | 0 | 0 | 0 |
| 17 | ಎಕೆಎಮ್‌ಯು ಶುಲ್ಕ | 105 | ***105** | 105 | 105 | ***105** | 105 |
| 18 | ಭಾರತೀಯ ಯುವ ರೆಡ್‌ಕ್ರಾಸ್ ಸಂಸ್ಥೆ ಶುಲ್ಕ | 95 | 95 | 95 | 0 | 0 | 0 |
| 19 | ಗುಂಪು ಆರೋಗ್ಯ ವಿಮೆ | 545 | 545 | 545 | 0 | 0 | 0 |
| 20 | ಎನ್‌ಎಸ್‌ಎಸ್ ಶುಲ್ಕ | 50 | 50 | 50 | 0 | 0 | 0 |
| **21** | **ಒಟ್ಟು ರೂ. (ಪಾವತಿಸತಕ್ಕದ್ದು)** | **5095** | **5095** | **5095** | **2535** | **2535** | **2535** |

ದ್ವಿತೀಯ ವರ್ಷ :

| ಕ್ರ.ಸಂ | ವಿವರಗಳು | ಪ್ರಥಮ ಷಾಣ್ಮಾಸಿಕ | | | ದ್ವಿತೀಯ ಷಾಣ್ಮಾಸಿಕ | | |
|---|---|---|---|---|---|---|---|
| | | GM/ Others | SC/ST | Cat – I | GM /Others | SC/ST | Cat –I |
| 1 | ನೋಂದಣಿ ಶುಲ್ಕ | 125 | ***125** | 125 | 125 | ***125** | 125 |
| 2 | ಬೋಧನಾ ಶುಲ್ಕ | 600 | ***600** | **600 | 890 | ***890** | **890 |
| 3 | ಪ್ರಯೋಗಾಲಯ ಶುಲ್ಕ | 210 | ***210** | **210 | 400 | ***400** | **400 |
| 4 | ಪ್ರವೇಶ ಶುಲ್ಕ | 0 | 0 | 0 | 0 | 0 | 0 |
| 5 | ಗ್ರಂಥಾಲಯ ಶುಲ್ಕ | 210 | ***210** | **210 | 0 | 0 | 0 |
| 6 | ಕ್ರೀಡಾ ಶುಲ್ಕ | 510 | ***510** | **510 | 0 | 0 | 0 |
| 7 | ಶೈಕ್ಷಣಿಕ ಮಾಹಿತಿ ಮತ್ತು ನಿಭಂದನಾ ಶುಲ್ಕ | 0 | 0 | 0 | 0 | 0 | 0 |
| 8 | ಮಾಸಪತ್ರಿಕೆ ಶುಲ್ಕ | 0 | 0 | 0 | 105 | 105 | 105 |
| 9 | ಚಿಕಿತ್ಸಾ ಶುಲ್ಕ | 105 | ***105** | 105 | 0 | 0 | 0 |
| 10 | ಸಹಕಾರ/ಸಂಸ್ಥೆ ಶುಲ್ಕ | 100 | 100 | 100 | 0 | 0 | 0 |
| 11 | ವಿದ್ಯಾರ್ಥಿ ಕಲ್ಯಾಣ ನಿಧಿ | 100 | 100 | 100 | 0 | 0 | 0 |
| 12 | ಎಚ್ಚರಿಕೆ ಹಣ (Caution money) | 0 | 0 | 0 | 0 | 0 | 0 |
| 13 | ಪ್ರವಾಸ ಶುಲ್ಕ | 510 | ***510** | 510 | 510 | ***510** | 510 |
| 14 | ಪರೀಕ್ಷಾ ಶುಲ್ಕ | 210 | ***210** | **210 | 400 | ***400** | **400 |
| 15 | ಗುರುತಿನ ಚೀಟಿ ಶುಲ್ಕ | 0 | 0 | 0 | 0 | 0 | 0 |
| 16 | ದಾಖಲಾತಿ ಶುಲ್ಕ | 0 | 0 | 0 | 0 | 0 | 0 |
| 17 | ಎಕೆಎಮ್‌ಯು ಶುಲ್ಕ | 105 | ***105** | 105 | 105 | ***105** | 105 |
| 18 | ಭಾರತೀಯ ಯುವ ರೆಡ್‌ಕ್ರಾಸ್ ಸಂಸ್ಥೆ ಶುಲ್ಕ | 95 | 95 | 95 | 0 | 0 | 0 |
| 19 | ಗುಂಪು ಆರೋಗ್ಯ ವಿಮೆ | 545 | 545 | 545 | 0 | 0 | 0 |
| 20 | ಎನ್‌ಎಸ್‌ಎಸ್ ಶುಲ್ಕ | 0 | 0 | 0 | 0 | 0 | 0 |
| **21** | **ಒಟ್ಟು ರೂ. (ಪಾವತಿಸತಕ್ಕದ್ದು)** | **3425** | **3425** | **3425** | **2535** | **2535** | **2535** |

**ಸೂಚನೆ :**

**1)** ಆಯಾ ಸಮಯಕ್ಕೆ ಸರ್ಕಾರ ಹೊರಡಿಸುವ ಆದೇಶದಂತೆ ವಿವಿಧ ವರ್ಗದ ವಿದ್ಯಾರ್ಥಿಗಳಿಂದ ಶುಲ್ಕವನ್ನು ಭರಿಸಿಕೊಳ್ಳುವುದು.

**2)** * ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಈ ಶುಲ್ಕಗಳನ್ನು ಪಡೆಯಲು ಮಹಾವಿದ್ಯಾಲಯದ ವಿದ್ಯಾರ್ಥಿಗಳು ಮತ್ತು ಡೀನ್‌ಗಳು ಸಂಬಂಧಪಟ್ಟ ಇಲಾಖೆಗೆ ಅರ್ಜಿಯನ್ನು ಸಲ್ಲಿಸುವುದು.

**3)** ** ಪ್ರವರ್ಗ–1 ವಿದ್ಯಾರ್ಥಿಗಳು ಪ್ರವೇಶ ಪಡೆಯುವ ಸಮಯದಲ್ಲಿ ಕಾಲಂ 21 ರಲ್ಲಿನ ನಿಗದಿತ ಶುಲ್ಕವನ್ನು ಭರಿಸುವುದು. ವಿದ್ಯಾರ್ಥಿಗಳ ಮರುಪಾವತಿ ಮೊತ್ತವು ನೇರವಾಗಿ ವಿದ್ಯಾರ್ಥಿಗಳಿಗೆ ಜಮಾ ಆಗುವದರಿಂದ ಸದರಿ ವಿದ್ಯಾರ್ಥಿಗಳು ಜಿಲ್ಲಾ ಹಿಂದುಳಿದ ವರ್ಗಗಳ ಇಲಾಖೆಗೆ ಮೂಲ ದಾಖಲಾತಿಯೊಂದಿಗೆ ಅನ್‌ಲೈನ್ ಅರ್ಜಿಯನ್ನು ಸಲ್ಲಿಸಬೇಕು.

**ಠೇವಣಿ :** ಡಿಪ್ಲೋಮಾ (ತೋಟಗಾರಿಕೆ) ಎರಡು ವರ್ಷದ ಕೋರ್ಸ್‌ಗೆ ಪ್ರವೇಶ ಪಡೆಯುವವರು ಮೇಲ್ಕಂಡಂತೆ ಶುಲ್ಕ ಪಾವತಿಸುವ ಜೊತೆಗೆ ರೂ. 3,000/– ಮುಂಜಾಗ್ರತಾ ಠೇವಣಿ (ಕಾಶನ್ ಮನಿ ಡಿಪಾಜಿಟ್) ಇಡತಕ್ಕದ್ದು. ಕೋರ್ಸ್ ಅವಧಿ ಮುಗಿದ ನಂತರ ಮುಂಜಾಗ್ರತಾ ಠೇವಣಿ ಹಣವನ್ನು ಕೋರ್ಸ್‌ನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದವರಿಗೆ ಮಾತ್ರ ಹಿಂತಿರುಗಿಸಲಾಗುವದು.

**ನೋಂದಣಿ :**

ಡಿಪ್ಲೋಮಾ (ತೋಟಗಾರಿಕೆ) ಎರಡು ವರ್ಷದ ಕೋರ್ಸ್‌ಗೆ ನೋಂದಣಿಯಾದ ನಂತರವೇ ಪ್ರವೇಶ ಪ್ರಕ್ರಿಯೆಯು ಪೂರ್ಣವಾಗುವುದು. ಆದ್ದರಿಂದ ಕೋರ್ಸಿಗೆ ಪ್ರವೇಶ ಪಡೆದ ಅಭ್ಯರ್ಥಿಗಳು ಖುದ್ದಾಗಿ ಹಾಜರಾಗಿ

ನೋಂದಣಿ ಮಾಡಿಸಬೇಕು. ಮೊದಲನೆಯ ಸೆಮಿಸ್ಟರ್‌ದಲ್ಲಿ ನಿಗದಿತ ದಿನಾಂಕದೊಳಗೆ ಕೋರ್ಸ್‌ಗೆ ನೋಂದಣಿ ಮಾಡದಿದ್ದಲ್ಲಿ ಅಂತಹ ಅಭ್ಯರ್ಥಿಯ ಆಯ್ಕೆ ರದ್ದಾಗುವುದು.

ವಿಶ್ವವಿದ್ಯಾಲಯದಿಂದ ಆಯ್ಕೆಯಾದ ಅಭ್ಯರ್ಥಿಯು ನಿಗದಿಪಡಿಸಿದ ದಿನಾಂಕದೊಳಗಾಗಿ ಎಲ್ಲ ಶುಲ್ಕವನ್ನು ಪಾವತಿಮಾಡಿ ನಿಗದಿತ ದಿನಾಂಕದೊಳಗೆ ನೋಂದಣಿಗಾಗಿ ತಮ್ಮ ಮೂಲ ದಾಖಲಾತಿಗಳೊಂದಿಗೆ ಸಂಬಂಧಪಟ್ಟ ಮಹಾವಿದ್ಯಾಲಯಗಳಲ್ಲಿ ಹಾಜರಿರಬೇಕು.

ಹೊಸದಾಗಿ ಪ್ರವೇಶ ಪಡೆದ ಅಭ್ಯರ್ಥಿಗಳ ಅನುಕೂಲಕ್ಕಾಗಿ ಸಂಬಂಧಿಸಿದ ಡೀನ್/ಮುಖ್ಯಸ್ಥರು ಓರಿಯಂಟೇಶನ್ ಕಾರ್ಯಕ್ರಮ ಹಮ್ಮಿಕೊಂಡು ಕೋರ್ಸ್‌ಗಳ ಬಗ್ಗೆ ವಿವರವಾದ ಮಾಹಿತಿ ನೀಡುವರು. ಕಾಯ್ದಿಟ್ಟ ಅಭ್ಯರ್ಥಿಗಳ ನೋಂದಣಿ ಅವಧಿಯು ಸೆಮಿಸ್ಟರ್ ಪ್ರಾರಂಭವಾದ ನಾಲ್ಕು ವಾರಗಳ ನಂತರ ಕೊನೆಗೊಳ್ಳುವುದು. ಪ್ರವೇಶ ಪಡೆದ ಅಭ್ಯರ್ಥಿಯ ಹಾಜರಾತಿಯನ್ನು ಆತನು/ಅವಳು ನೋಂದಣಿ ಮಾಡಿಸಿದ ದಿನಾಂಕದಿಂದ ಪರಿಗಣಿಸಲಾಗುವುದು.

ಪ್ರವೇಶ ಪಡೆದ ಅಭ್ಯರ್ಥಿಯು ಮೊದಲನೆ ಸೆಮಿಸ್ಟರ್‌ದಲ್ಲಿ ಅಭ್ಯಸಿಸುವುದು ಕಡ್ಡಾಯ. ಯಾವುದೇ ಕಾರಣಕ್ಕೂ ಮೊದಲನೆಯ ಸೆಮಿಸ್ಟರ್‌ದಲ್ಲಿ ಗೈರು ಹಾಜರಾದಲ್ಲಿ ಅವರ ಪ್ರವೇಶವು ರದ್ದಾಗುವುದು. ಮೊದಲ ಸೆಮಿಸ್ಟರ್‌ದಲ್ಲಿ ಅಭ್ಯರ್ಥಿಯು ಕನಿಷ್ಠ ಒಂದು ವಿಷಯದಲ್ಲಿ SA (ಕಡಿಮೆ ಹಾಜರಾತಿ) US (ಅಸಮಾಧಾನಕರ) ಅಥವಾ F (ಫೇಲ್) ಈ ಶ್ರೇಣಿಗಳನ್ನು ಹೊರತುಪಡಿಸಿ ಉಳಿದ ಶ್ರೇಣಿಯನ್ನು ಪಡೆದು ಪಾಸಾಗಬೇಕು, ಅಂದರೆ ಮೊದಲನೆಯ ಸೆಮಿಸ್ಟರದಲ್ಲಿ ಕನಿಷ್ಠ ಒಂದು ವಿಷಯದಲ್ಲಾದರೂ ಉತ್ತೀರ್ಣ (ಪಾಸ್) ಶ್ರೇಣಿಯನ್ನು ಪಡೆದು ಪಾಸಾಗಬೇಕು. ಇಲ್ಲದಿದ್ದಲ್ಲಿ ಅಂತಹವರ ಪ್ರವೇಶವು ರದ್ದಾಗುವುದು.

**ವಿದ್ಯಾರ್ಥಿ ನಿಲಯ ಸೌಲಭ್ಯ :**

1. ಆವರಣದಲ್ಲಿ ಮೊದಲು ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳಿಗೆ ಆದ್ಯತೆ ಮೇರೆಗೆ ವಿದ್ಯಾರ್ಥಿನಿಲಯದಲ್ಲಿ ಅವಕಾಶ ನೀಡಲಾಗುವುದು. ವಿದ್ಯಾರ್ಥಿನಿಲಯದ ಪ್ರವೇಶಕ್ಕೆ, ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಸಂಬಂಧಪಟ್ಟ ವಿದ್ಯಾರ್ಥಿನಿಲಯದ ನಿಲಯಪಾಲಕರಿಗೆ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಬೇಕು.

2. ಪ್ರವೇಶ ಪಡೆಯುವ ಸಮಯದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯು ಒಂದು ಸಲ ಮಾತ್ರ ಭೋಜನಶಾಲೆ ಠೇವಣಿಯನ್ನು ಈ ಕೆಳಗಿನಂತೆ ಪಾವತಿಸಬೇಕು. ಈ ಹಣವನ್ನು ವಿದ್ಯಾರ್ಥಿಯು ವಿದ್ಯಾರ್ಥಿನಿಲಯವನ್ನು ಬಿಟ್ಟು ಹೋಗುವ ಸಂದರ್ಭದಲ್ಲಿ ಆತನ ಎಲ್ಲ ಬಾಕಿಗಳು ಪಾವತಿಯಾಗಿರುವುದನ್ನು ಖಚಿತಪಡಿಸಿಕೊಂಡು ಹಿಂದಿರುಗಿಸಲಾಗುವುದು.

   i) ಪರಿಶಿಷ್ಟಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ–1ರವರಿಗೆ – ರೂ. 6,000/–
   ii) ಇತರರಿಗೆ – ರೂ. 9,000/–

3. ಮೇಲಿನ ಶುಲ್ಕಗಳೊಂದಿಗೆ ಪ್ರವೇಶದ ಸಮಯದಲ್ಲಿ ಹಾಗೂ ಪ್ರತಿ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಪ್ರತಿ ವಿದ್ಯಾರ್ಥಿಯು ಕೆಳಗಿನಂತೆ ಶುಲ್ಕವನ್ನು ಪಾವತಿಸಬೇಕು.

   i) ಅರ್ಜಿ ಶುಲ್ಕ (+ ನಿಬಂಧನಾ ಪುಸ್ತಕ) – ರೂ. 150/–
   ii) ಪ್ರವೇಶ ಶುಲ್ಕ – ರೂ. 150/–
   iii) ಮರುಪ್ರವೇಶ ಶುಲ್ಕ – ರೂ. 150/–
   iv) ಕ್ರೀಡೆ ಮತ್ತು ವಾಚನಾಲಯ ಶುಲ್ಕ – ರೂ. 225/–
   v) ಪಾತ್ರೆಗಳ ನಿರ್ವಹಣೆ – ರೂ. 225/–

4. ವಿದ್ಯಾರ್ಥಿನಿಲಯದಲ್ಲಿನ ಪ್ರತಿಯೊಬ್ಬ ವಿದ್ಯಾರ್ಥಿಯು ಈ ಮುಂದಿನಂತೆ ಪ್ರತಿ ತಿಂಗಳು ಶುಲ್ಕವನ್ನು ಪಾವತಿಸಬೇಕು.

   i) ವಿದ್ಯುಚ್ಛಕ್ತಿ ಬಿಲ್: ಇದನ್ನು ಆಯಾ ಕಾಲಕ್ಕೆ ವಿಶ್ವವಿದ್ಯಾನಿಲಯವು ನಿಗದಿಪಡಿಸುವ ಮಾರ್ಗದರ್ಶಿಗಳನ್ವಯ ಆಯಾ ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳಿಂದ ಸಂಗ್ರಹಿಸಲಾಗುವುದು.

   ಮುಖ್ಯ ವಾರ್ಡನ್/ವಾರ್ಡನ್‌ರವರು ತಿಳಿಸುವಂತೆ ಭೋಜನಶಾಲೆ ವೆಚ್ಚ ಮತ್ತು ದಂಡ

   i) ಕೊಠಡಿ ಬಾಡಿಗೆ – ರೂ. 150/– ಪ್ರತಿ ತಿಂಗಳಿಗೆ
   ii) ವಿದ್ಯಾರ್ಥಿ ನಿಲಯದ ಅಭಿವೃದ್ಧಿ ನಿಧಿ – ರೂ. 150/– ಪ್ರತಿ ತಿಂಗಳಿಗೆ

**ಸಾಮಾನ್ಯ ಮಾಹಿತಿ :** ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ನಿಯಮಾವಳಿಗಳಿಗೆ ಬದ್ಧವಾಗಿರಬೇಕು. ವಿದ್ಯಾರ್ಥಿಗಳ ಶಿಸ್ತುಬದ್ಧ ನಡವಳಿಕೆಗಳ ವಿವರವನ್ನು ವಿಶ್ವವಿದ್ಯಾಲಯದ ಶೈಕ್ಷಣಿಕ ಮಾಹಿತಿ ಹಾಗೂ ನಿಬಂಧನೆಗಳ ಕೈಪಿಡಿಯಲ್ಲಿ ವಿವರಿಸಲಾಗಿದೆ. ಪ್ರವೇಶ ಪಡೆದ ಎಲ್ಲ ಅಭ್ಯರ್ಥಿಗಳು ತಾವು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ನಿಯಮಾವಳಿಗಳಿಗೆ ಹಾಗೂ ಕಾಲಕಾಲಕ್ಕೆ ತಿದ್ದುಪಡಿಯಾಗುವ ನಿಯಮಾವಳಿಗಳಿಗೆ ಬದ್ಧವಾಗಿದ್ದು, ಅದರಂತೆ ನಡೆದುಕೊಳ್ಳುವ ಬಗ್ಗೆ ಬರವಣಿಗೆಯಲ್ಲಿ ಮುಚ್ಚಳಿಕೆ ಪತ್ರ ಕೊಡುವುದು ಕಡ್ಡಾಯವಾಗಿರುವುದು.

ಈ ಮಾಹಿತಿ ಪತ್ರಿಕೆಯಲ್ಲಿ (prospectus) ನಮೂದಿಸಿದ/ನಿಗದಿಪಡಿಸಿದ ಯಾವುದೇ ಅಥವಾ ಎಲ್ಲ ನಿಬಂಧನೆಗಳನ್ನು ಬದಲಾವಣೆ ಮಾಡುವ ಹಕ್ಕನ್ನು ವಿಶ್ವವಿದ್ಯಾಲಯ ಹೊಂದಿದೆ.

**ಅಭ್ಯರ್ಥಿಗಳು ಈ ಕೆಳಗಿನ ಅಂಶಗಳನ್ನು ಗಮನಿಸಬೇಕು :**

- ಪ್ರವೇಶದ ವಿವರಣಾ ಪತ್ರಿಕೆಯಲ್ಲಿ ನಿಗದಿಪಡಿಸಿದಂತೆ ಪ್ರವೇಶದ ಅರ್ಜಿಯು ಎಲ್ಲ ವಿವರಗಳನ್ನು ಹೊಂದಿರಬೇಕು ಹಾಗೂ ಸೂಕ್ತ ದಾಖಲೆಗಳ ಪ್ರತಿಗಳನ್ನು ಲಗತ್ತಿಸಬೇಕು. ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
- ಈ ಕೋರ್ಸ್‌ಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ಅನಿವಾರ್ಯ ಕಾರಣಗಳಿಂದ ಯಾವುದೇ ಬದಲಾವಣೆಯಾದಲ್ಲಿ ಅದನ್ನು ಪ್ರಮುಖ ದಿನಪತ್ರಿಕೆಗಳ ಮೂಲಕ ಪ್ರಕಟಿಸಲಾಗುವುದು. ಈ ವಿಷಯಕ್ಕೆ ಪ್ರತಿ ಅಭ್ಯರ್ಥಿಗೆ ಪ್ರತ್ಯೇಕವಾಗಿ ಮಾಹಿತಿಯನ್ನು ತಿಳಿಸಲಾಗುವುದಿಲ್ಲ.
- ಈ ಪ್ರವೇಶವು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ನಿಯಮಾವಳಿಗಳಿಗೆ ಹಾಗೂ ಸರಕಾರಿ ಆದೇಶಗಳನ್ವಯ ಅಭ್ಯರ್ಥಿಯ ಅರ್ಹತೆಯನ್ನು ಅವಲಂಬಿಸಿದೆ.
- ಪ್ರವೇಶಕ್ಕೆ ಆಯ್ಕೆಯಾದಲ್ಲಿ ಅಭ್ಯರ್ಥಿಯು ಪರಿಶೀಲನೆ/ಹಾಜರಾತಿ ಸಮಯದಲ್ಲಿ ಎಲ್ಲ ಮೂಲದಾಖಲೆಗಳನ್ನು ಪರಿಶೀಲನೆಗೆ ಒದಗಿಸಬೇಕು ಮತ್ತು ಅಂದೇ ನಿಗದಿತ ಶುಲ್ಕವನ್ನು ಸಂದಾಯ ಮಾಡಬೇಕು.

**ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ**

| ಕುಲಸಚಿವರ ಕಛೇರಿ<br>ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ,<br>ಉದ್ಯಾನಗಿರಿ, ನವನಗರ, ಬಾಗಲಕೋಟ<br>☎ : 08354–230280/230278/9480696389<br>e-mail: registrar@uhsbagalkot.edu.in | ಡೀನ್ ಸ್ನಾತಕೋತ್ತರ ಕಛೇರಿ<br>ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ,<br>ಉದ್ಯಾನಗಿರಿ, ನವನಗರ, ಬಾಗಲಕೋಟ,<br>☎ : 08354–230308/230301/9480696386<br>e-mail: deanpgs@uhsbagalkot.edu.in |
|---|---|
| **Website** : http//www.uhsbagalkot.edu.in | |

**ಮಾಹಿತಿಗಾಗಿ ಸಂಪರ್ಕಿಸಿರಿ**

1) ಡೀನ್, ಕಿತ್ತೂರರಾಣಿ ಚನ್ನಮ್ಮ ತೋಟಗಾರಿಕೆ ಮಹಾವಿದ್ಯಾಲಯ, ಅರಭಾವಿ, ತಾ : ಗೋಕಾಕ.
   ದೂರವಾಣಿ ಸಂಖ್ಯೆ (ಕಛೇರಿ): 08332–293436 (ಮೋ) : 09449872860
   **e-mail:** dean.coharabhavi@uhsbagalkot.edu.in
2) ಡೀನ್, ತೋಟಗಾರಿಕೆ ಮಹಾವಿದ್ಯಾಲಯ, ಕೋಲಾರ (ಹೊಗಳಗೆರೆ) ದೂರವಾಣಿ ಸಂಖ್ಯೆ (ಕಛೇರಿ): 08152–243208 (ಮೋ) : 09480696384 **e-mail:** dean.cohkolar@uhsbagalkot.edu.in
3) ಸಂಯೋಜಕರು, ಡಿಪ್ಲೋಮಾ (ತೋಟಗಾರಿಕೆ) ಎರಡು ವರ್ಷದ ಕೋರ್ಸ್, ತೋ.ಮ. ಅರಭಾವಿ (ಗೋಕಾಕ), ಮೊಬೈಲ್ ಸಂಖ್ಯೆ : 9449570725
4) ಸಂಯೋಜಕರು, ಡಿಪ್ಲೋಮಾ (ತೋಟಗಾರಿಕೆ) ಎರಡು ವರ್ಷದ ಕೋರ್ಸ್, ತೋ.ಮ. ಕೋಲಾರ (ಹೊಗಳಗೆರೆ), ಮೊಬೈಲ್ ಸಂಖ್ಯೆ : 8453611918

## ಶೆಡ್ಯೂಲ್ - I

ನಿಯಮ 9(1) (ಬಿ) ಅಂದರೆ ಅಧ್ಯಾಯ Iರ ವಿಷಯ 7(1) (ಬಿ) ಯ ಉದ್ದೇಶಕ್ಕಾಗಿ ಆಟಗಳ ಮತ್ತು ಕ್ರೀಡೆಗಳ ಪಟ್ಟಿ

ಸೂಪರ್ ಎ ಕ್ರೀಡೆಗಳು

1. ಒಲಂಪಿಕ್ ಕ್ರೀಡೆಗಳು
2. ವಿಶ್ವ ಚಾಂಪಿಯನ್‌ಶಿಪ್‌ಗಳು
3. ಏಷಿಯನ್ ಚಾಂಪಿಯನ್‌ಶಿಪ್‌ಗಳು
4. ಏಷಿಯನ್ ಕ್ರೀಡೆಗಳು
5. ಕಾಮನ್‌ವೆಲ್ತ್ ಕ್ರೀಡೆಗಳು
6. ಕಾಮನ್‌ವೆಲ್ತ್ ಚಾಂಪಿಯನ್‌ಶಿಪ್‌ಗಳು

ಎ. ಕ್ರೀಡೆಗಳು

1. ಆಫ್ರೋ ಏಷಿಯನ್ ಕ್ರೀಡೆಗಳು
2. ಎಸ್.ಎ.ಎಫ್. ಕ್ರೀಡೆಗಳು
3. ಅಂತರರಾಷ್ಟ್ರೀಯ ಮೀಟ್‌ಗಳು

ಬಿ. ಕ್ರೀಡೆಗಳು

1. ರಾಷ್ಟ್ರೀಯ ಕ್ರೀಡೆಗಳು
2. ರಾಷ್ಟ್ರೀಯ ಚಾಂಪಿಯನ್‌ಶಿಪ್‌ಗಳು
3. ಅಖಿಲ ಭಾರತ ವಲಯ ಮೀಟ್‌ಗಳು4. ರಾಷ್ಟ್ರೀಯ ಮಟ್ಟದ ಟೂರ್ನಮೆಂಟ್‌ಗಳು/ಸ್ಕೂಲ್ ಗೇಮ್ಸ್ ಫೆಡರೇಶನ್ ಆಫ್ ಇಂಡಿಯಾ ನಡೆಸುವ ಚಾಂಪಿಯನ್‌ಶಿಪ್‌ಗಳು
5. ಭಾರತೀಯ ಕ್ರೀಡಾ ಪ್ರಾಧಿಕಾರ ನಡೆಸುವ ಅಖಿಲ ಭಾರತ ಗ್ರಾಮೀಣ ಕ್ರೀಡಾ ಮೀಟ್‌ಗಳು
6. ಭಾರತೀಯ ಕ್ರೀಡಾ ಪ್ರಾಧಿಕಾರ ನಡೆಸುವ ಅಖಿಲ ಭಾರತ ಮಹಿಳಾ ಕ್ರೀಡಾ ಮೀಟ್ ಗಳು/ಈ ಮುಂದಿನ ಭಾರತ ಸರ್ಕಾರ ಗುರುತಿಸಿರುವ 63 ರಾಷ್ಟ್ರೀಯ ಕ್ರೀಡಾ ಫೆಡರೇಶನ್‌ಗಳು ನಡೆಸುವ ಚಾಂಪಿಯನ್‌ಶಿಪ್‌ಗಳು:
   1. ಆರ್ಚರಿ ಫೆಡರೇಶನ್ ಆಫ್ ಇಂಡಿಯ
   2. ಅಮೆಚೂರ್ ಅಥ್ಲೆಟಿಕ್ಸ್ ಫೆಡರೇಶನ್ ಆಫ್‌ಇಂಡಿಯ
   3. ಅಮೆಚೂರ್ ಬ್ಯಾಸ್ಕೆಟ್ ಬಾಲ್ ಫೆಡರೇಶನ್ ಆಫ್ ಇಂಡಿಯ
   4. ಇಂಡಿಯನ್ ಅಮೆಚೂರ್ ಬಾಕ್ಸಿಂಗ್ ಫೆಡರೇಶನ್
   5. ಸೈಕ್ಲಿಂಗ್ ಫೆಡರೇಶನ್ ಆಫ್ ಇಂಡಿಯ
   6. ಈಕ್ವೆಸ್ಟ್ರಿಯನ್ ಫೆಡರೇಶನ್ ಆಫ್ ಇಂಡಿಯ
   7. ಅಖಿಲ ಭಾರತ ಫುಟ್ ಬಾಲ್ ಫೆಡರೇಶನ್

8. ಫೆನ್ಸಿಂಗ್ ಅಸೋಸಿಯೇಷನ್ ಆಫ್ ಇಂಡಿಯ
9. ಜಿಮ್ನಾಸ್ಟಿಕ್ಸ್ ಫೆಡರೇಶನ್ ಆಫ್ ಇಂಡಿಯ
10. ಹ್ಯಾಂಡ್ ಬಾಲ್‌ಫೆಡರೇಶನ್ ಆಫ್ ಇಂಡಿಯ
11. ಇಂಡಿಯನ್ ಹಾಕಿ ಫೆಡರೇಶನ್
12. ಜುಡೊ ಫೆಡರೇಶನ್ ಆಫ್ ಇಂಡಿಯ
13. ಅಮೆಚೂರ್ ಕಬ್ಬಡಿ ಫೆಡರೇಶನ್ ಆಫ್ ಇಂಡಿಯ
14. ಖೊ-ಖೊ ಫೆಡರೇಶನ್ ಆಫ್ ಇಂಡಿಯ
15. ಭಾರತೀಯ ಕಯಾಕಿಂಗ್ ಮತ್ತು ಕೆನೋಯಿಂಗ್ ಅಸೋಸಿಯೇಷನ್
16. ಭಾರತದ ರಾಷ್ಟ್ರೀಯ ರೈಫಲ್ ಅಸೋಸಿಯೇಷನ್
17. ನೆಟ್ ಬಾಲ್ ಫೆಡರೇಶನ್ ಆಫ್ ಇಂಡಿಯ
18. ರೋಯಿಂಗ್ ಫೆಡರೇಶನ್ ಆಫ್ ಇಂಡಿಯ
19. ಸ್ವಿಮ್ಮಿಂಗ್ ಫೆಡರೇಶನ್ ಆಫ್ ಇಂಡಿಯ
20. ಟೇಬಲ್ ಟೆನ್ನಿಸ್ ಫೆಡರೇಶನ್ ಆಫ್ ಇಂಡಿಯ
21. ಅಖಿಲ ಭಾರತ ಲಾನ್‌ಟೆನ್ನಿಸ್ ಅಸೋಸಿಯೇಷನ್
22. ಟೇಕ್-ವೊಂಡೊ ಫೆಡರೇಶನ್ ಆಫ್ ಇಂಡಿಯ
23. ವಾಲಿಬಾಲ್ ಫೆಡರೇಶನ್ ಆಫ್ ಇಂಡಿಯ
24. ಇಂಡಿಯನ್ ವೈಟ್ ಲಿಫ್ಟಿಂಗ್ ಫೆಡರೇಶನ್ ಆಫ್ ಇಂಡಿಯ
25. ರೆಜಲಿಂಗ್ ಫೆಡರೇಶನ್ ಆಫ್ ಇಂಡಿಯ
26. ಭಾರತೀಯ ಮಹಿಳಾ ಹಾಕಿ ಅಸೋಸಿಯೇಶನ್
27. ಭಾರತೀಯ ಯಾಟಿಂಗ್ ಅಸೋಸಿಯೇಶನ್
28. ಭಾರತೀಯ ಟ್ರಯಾಥ್ಲಾನ್ ಫೆಡರೇಷನ್
29. ಭಾರತೀಯ ಬ್ಯಾಡ್ಮಿಟನ್ ಅಸೋಸಿಯೇಶನ್
30. ಅಮೆಚೂರ್ ಬೇಸ್ ಬಾಲ್ ಫೆಡರೇಶನ್ ಆಫ್ ಇಂಡಿಯ
31. ಅಖಿಲ ಭಾರತ ಕರಾಟೆ-ಡು ಫೆಡರೇಶನ್
32. ವಿಂಟರ್ ಗೇಮ್ಸ್ ಫೆಡರೇಶನ್ ಆಫ್ ಇಂಡಿಯ
33. ಫೆಡರೇಷನ್ ಆಫ್ ಮೋಟಾರ್ ಸ್ಪೋರ್ಟ್ಸ್ ಕ್ಲಬ್ ಆಫ್ ಇಂಡಿಯ
34. ಬ್ರಿಡ್ಜ್ ಫೆಡರೇಶನ್ ಆಫ್ ಇಂಡಿಯ
35. ಟೆನ್ನಿ ಕಾಯ್ಟ್ ಫೆಡರೇಶನ್ ಆಫ್ ಇಂಡಿಯ
36. ಸಾಫ್ಟ್ ಬಾಲ್ ಫೆಡರೇಶನ್ ಆಫ್ ಇಂಡಿಯ
37. ಏರೋ ಕ್ಲಬ್ ಆಫ್ ಇಂಡಿಯ
38. ಇಂಡಿಯನ್ ಗಾಲ್ಫ್ ಯೂನಿಯನ್
39. ಕಿವುಡರ ಅಖಿಲ ಭಾರತ ಕ್ರೀಡಾ ಮಂಡಳಿ
40. ಅಖಿಲ ಭಾರತ ಕೇರಂ ಫೆಡರೇಷನ್
41. ಟಗ್ ಆಫ್ ವಾರ್ ಫೆಡರೇಶನ್ ಆಫ್ ಇಂಡಿಯ
42. ಅಟ್ಯಾ ಪಟ್ಯಾ ಫೆಡರೇಶನ್ ಆಫ್ ಇಂಡಿಯ
43. ಬಿಲಿಯರ್ಡ್ಸ್ ಮತ್ತು ಸ್ನೂಕರ್ ಫೆಡರೇಶನ್ ಆಫ್ ಇಂಡಿಯ
44. ಇಂಡಿಯನ್ ಒಲಿಂಪಿಕ್ ಅಸೋಸಿಯೇಷನ್
45. ಸೈಕಲ್ ಪೋಲೊ ಫೆಡರೇಶನ್ ಆಫ್ ಇಂಡಿಯ
46. ಸ್ಕ್ವಾಷ್ ರ್‍ಯಾಕೆಟ್ ಫೆಡರೇಶನ್ ಆಫ್ ಇಂಡಿಯ
47. ಟೆನ್ನಿಸ್ ಬಾಲ್ ಕ್ರಿಕೆಟ್ ಫೆಡರೇಶನ್ ಆಫ್ ಇಂಡಿಯ
48. ಇಂಡಿಯನ್ ಪೋಲೊ ಅಸೋಸಿಯೇಷನ್
49. ಟೆನ್ ಪಿನ್ ಬೌಲಿಂಗ್ ಫೆಡರೇಶನ್ ಆಫ್ ಇಂಡಿಯ
50. ವೂಶು ಅಸೋಸಿಯೇಷನ್ ಆಫ್ ಇಂಡಿಯ
51. ಕಾರ್ಫ್ ಬಾಲ್ ಫೆಡರೇಶನ್ ಆಫ್ ಇಂಡಿಯ
52. ಇಂಡಿಯನ್ ಪವರ್ ಲಿಫ್ಟಿಂಗ್ ಅಸೋಸಿಯೇಷನ್
53. ಸೆಪಾಕ್ ಟಕ್ರಾ ಫೆಡರೇಶನ್ ಆಫ್ ಇಂಡಿಯ
54. ಮಲ್ಲಕಂಬ ಫೆಡರೇಶನ್ ಆಫ್ ಇಂಡಿಯ
55. ರೋಲರ್ ಸ್ಕೇಟಿಂಗ್ ಫೆಡರೇಶನ್ ಆಫ್ ಇಂಡಿಯ
56. ಶಾಲಾ ಕ್ರೀಡೆಗಳ ಫೆಡರೇಶನ್ ಆಫ್ ಇಂಡಿಯ
57. ಶೂಟಿಂಗ್ ಬಾಲ್ ಫೆಡರೇಶನ್ ಆಫ್ ಇಂಡಿಯ
58. ಭಾರತೀಯ ಮಹಿಳಾ ಕ್ರಿಕೆಟ್ ಅಸೋಸಿಯೇಷನ್
59. ಅಖಿಲ ಭಾರತ ಚೆಸ್ ಫೆಡರೇಷನ್
60. ಬೋರ್ಡ್ ಆಫ್ ಕಂಟ್ರೋಲ್ ಫಾರ್ ಕ್ರಿಕೆಟ್ ಇನ್ ಇಂಡಿಯ

ಅನುಬಂಧ – I

# UNIVERSITY OF HORTICULTURAL SCIENCES, BAGALKOT

## SEAT MATRIX OF DIPLOMA (HORT.) TWO YEAR COURSE 2020-21

| KITTUR RANI CHANNAMMA COLLEGE OF HORTICULTURE, ARABHAVI | |
|---|---|
| **GENERAL CHANNAL RESERVATION** | |
| **SPECIAL CATEGARY** | PH/CAPF-1, Def/ Ex.ser -1, NCC/Sports/S&G/AI-2 |
| **GENERAL QUOTA** | GMG – 6, GM(R)-1, SC(G)-1, SC(R)-1, CAT-1(G)-1, 2A(G)-1, 2A(R)-1, 2B(G)-1, 3B(G)-1, |
| **AGRICULTURIST QUOTA** | GM(PT)G-3, GM(PT)K-1, SC(PT)G-1, ST(PT)G-1, 2A (PT)G-1, 2B(PT)G-1, 3B(PT)G-1, |
| **HK CHANNAL RESERVATIONS** | |
| SPECIAL CATEGARY | PH/CAPF-1 |
| GENERAL QUOTA | GM(G)-1 |
| AGRICULTURIST QUOTA | GM(PT)G-1 |
| **COLLEGE OF HORTICULTURE, KOLAR** | |
| **GENERAL CHANNAL RESERVATION** | |
| **SPECIAL CATEGARY** | PH/CAPF-2, Def/ Ex.ser -1, NCC/Sports/S&G/AI-1 |
| GENERAL QUOTA | GMG – 5, GM(R)-1, GM(K)-1, SC(G)-2, ST(G)-1, CAT-1(G)-1, 2A(G)-2, 3A(G)-1, |
| AGRICULTURIST QUOTA | GM(PT)G-4, GM(PT)R-1, SC(PT)G-1, SC(PT)R-1, 2A (PT)G-1, 2A (PT)R-1, 3A (PT)G-1 |
| **HK CHANNAL RESERVATIONS** | |
| **SPECIAL CATEGARY** | - |
| GENERAL QUOTA | 3B(G)-1 |
| AGRICULTURIST QUOTA | GM(PT)G-1 |

ಅನುಬಂಧ –2

ವ್ಯವಸಾಯಗಾರರ/ಕಾರ್ಮಿಕರ ಮತ್ತು ಅವರ ಮಕ್ಕಳು ಸಲ್ಲಿಸಬೇಕಾಗಿರುವ ಪ್ರಮಾಣ ಪತ್ರಗಳು

## ವ್ಯವಸಾಯಗಾರರ ಪ್ರಮಾಣ ಪತ್ರ

ವ್ಯವಸಾಯಗಾರರ/ಕೃಷಿ ಭೂಮಿಯಲ್ಲಿ ಕೆಲಸ ಮಾಡುವ ಕಾರ್ಮಿಕರ ಮತ್ತು ಅವರ ಮಕ್ಕಳು ಸಲ್ಲಿಸಬೇಕಾಗಿರುವ ಪ್ರಮಾಣ ಪತ್ರ ತಮ್ಮ ಆದಾಯದ ಪ್ರಮುಖ ಮೂಲವು ವ್ಯವಸಾಯ/ಪಶುಸಂಗೋಪನೆ/ಮೀನುಗಾರಿಕೆ/ಕೃಷಿಗೆ ಸಂಬಂಧಪಟ್ಟ ಕೆಲಸ ಮಾಡುವ ಕೂಲಿಯಾಗಿದ್ದಲ್ಲಿ/ಇವರ ಮಕ್ಕಳಾಗಿದ್ದಲ್ಲಿ, ಕೃಷಿ/ಪಶುಸಂಗೋಪನೆ/ತೋಟಗಾರಿಕೆ ವಿಶ್ವ ವಿದ್ಯಾಲಯಗಳು ನಡೆಸುವ ಪ್ರಾಯೋಗಿಕ ಪರೀಕ್ಷೆ ಮೂಲಕ ಪ್ರವೇಶ ಪಡೆಯಲು ಅರ್ಹತೆಗಾಗಿ

ಎ) ಅಭ್ಯರ್ಥಿ/ತಂದೆ/ತಾಯಿ/ಪೋಷಕರ (ತಂದೆ ತಾಯಿಗಳಿಬ್ಬರು ಮೃತರಾಗಿದ್ದಲ್ಲಿ) ಘೋಷಣೆ

ನಾನು ಈ ಮೂಲಕ ನನ್ನ ವೃತ್ತಿಯು.............................................................. ಎಂದು ಮತ್ತು ಇದೇ ನನ್ನ ಆದಾಯದ ಪ್ರಮುಖ ಮೂಲವಾಗಿದೆಯೆಂದು ಘೋಷಿಸುತ್ತೇನೆ.

ಸಹಿ
(ಹೆಸರು(ಅಭ್ಯರ್ಥಿ/ತಂದೆ/ತಾಯಿ/ಪೋಷಕರು)

ಬ) ಕಂದಾಯಾಧಿಕಾರಿಗಳ ಪ್ರಮಾಣ ಪತ್ರ (ವರಮಾನವನ್ನು ಕಡ್ಡಾಯವಾಗಿ ನಮೂದಿಸಬೇಕು)

ಕೃಷಿ/ಪಶು/ತೋಟಗಾರಿಕೆ ವಿಶ್ವವಿದ್ಯಾಲಯಗಳ ಪ್ರವೇಶಕ್ಕೆ ಅರ್ಜಿದಾರರಾಗಿರುವ ಶ್ರೀ/ಕುಮಾರಿ.................................................ಯವರು ಶ್ರೀ/ಶ್ರೀಮತಿ..............................................................ಯವರ ಮಗ/ಮಗಳು/ಆಶ್ರಿತರು ಆಗಿರುತ್ತಾರೆ.
ಶ್ರೀಮತಿ/ಶ್ರೀ........................................................ಯವರ ವೃತ್ತಿಯು * ವ್ಯವಸಾಯ/ಪಶುಸಂಗೋಪನೆ/ಮೀನುಗಾರಿಕೆ (ಮಾಲಿಕರಾಗಿ ಅಥವಾ ಗೇಣಿದಾರರಾಗಿ) /ಕೃಷಿ ಭೂಮಿಯಲ್ಲಿ ದೈಹಿಕ ಶ್ರಮ ಆಗಿದ್ದು ಇವರ ಪ್ರಮುಖ ಆದಾಯವು ಕೃಷಿ/ಕೃಷಿ ಕಾರ್ಮಿಕ ವೃತ್ತಿಯಿಂದಲೇ ಆಗಿರುತ್ತದೆಯೆಂದು ಈ ಮೂಲಕ ದೃಢೀಕರಿಸಲಾಗಿದೆ.

ಇವರ ವಾರ್ಷಿಕ ಆದಾಯವು * ವ್ಯವಸಾಯ/ಕೃಷಿ ಭೂಮಿ/ಪಶು ಸಂಗೋಪನೆ/ಮೀನುಗಾರಿಕೆಯಲ್ಲಿ ದೈಹಿಕ ಶ್ರಮದಿಂದ ರೂ.................................. (ಅಕ್ಷರಗಳಲ್ಲಿ.........................................................................) ಗಳಾಗಿದೆಯೆಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕ : ತಹಶೀಲ್ದಾರ್‌ರ ಸಹಿ ಮತ್ತು ಕಛೇರಿ ಮೊಹರು
ಸ್ಥಳ : (ಪ್ರಮಾಣ ಪತ್ರ ನೀಡುವ ಅಧಿಕಾರಿಗಳ ಮೊಹರು)

* ಮೇಲಿನ ಪ್ರಮಾಣ ಪತ್ರದಲ್ಲಿ ನಿಮಗೆ ಅನ್ವಯಿಸದಿರುವುದನ್ನು ಹೊಡೆದುಹಾಕಿ.

**ಟಿಪ್ಪಣಿ :** ಪ್ರಮಾಣ ಪತ್ರ –2 ನ್ನು ಯಾವ ಸ್ಥಳದಲ್ಲಿ ಮೇಲೆ ಹೇಳಿದ ವೃತ್ತಿಯನ್ನು ನಡೆಸಲಾಗುತ್ತಿದೆಯೋ/ಜಮೀನು ಇದೆಯೋ ಅಲ್ಲಿನ ಕಂದಾಯ ತಹಶಿಲ್ದಾರರಿಂದಲೇ ಪಡೆದಿರಬೇಕು. ಬೇರೆ ಯಾರಿಂದಲಾದರೂ ಪಡೆದಿದ್ದರೆ ಅದನ್ನು ಪರಿಗಣಿಸಲಾಗುವುದಿಲ್ಲ.

# ವೇತನ ದೃಢೀಕರಣ ಪ್ರಮಾಣ ಪತ್ರ

(ಕೃಷಿ ಕೋಟಾದಡಿ ಪ್ರವೇಶಾತಿ ಪಡೆಯಲು ಬಯಸುವ ಅಭ್ಯರ್ಥಿಗಳ ತಂದೆ ತಾಯಿಗಳು ಸಲ್ಲಿಸುವ ವೇತನ ಹಾಗೂ ಕೃಷಿ ಆದಾಯದ ದೃಢೀಕರಣ ಪ್ರಮಾಣ ಪತ್ರ)

ಶ್ರೀಮತಿ/ಶ್ರೀ

________________________________ರವರು________________________

ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಇವರ ಮೂಲ ವೇತನ ಕಛೇರಿಯ ವರಮಾನಗಳಿಂದ ವಾರ್ಷಿಕ ವರಮಾನ ರೂ. ____________ಅಕ್ಷರಗಳಲ್ಲಿ)________________________ ಇವರ ವೇತನ ಶ್ರೇಣಿ ರೂ. ____________ಯಿಂದ ____________ರವರೆಗೆ ಇರುತ್ತದೆ.

ವೇತನ ಶ್ರೇಣಿಯ ದಿನಗಳು ದಿನಾಂಕ : 01.04.2019 ರಿಂದ 31.03.2020 ವರೆಗೆ ಈ ಕೆಳಗಿನಂತಿದೆ.

| ತಿಂಗಳು | ಮೂಲ ವೇತನ ಶ್ರೇಣಿ | ತುಟ್ಟಿ ಭತ್ಯೆ | ಮನೆ ಬಾಡಿಗೆ ಭತ್ಯೆ | ನಗರ ಭತ್ಯೆ | ಇನ್ನಿತರೆ | ಒಟ್ಟು |
|---|---|---|---|---|---|---|
| ಏಪ್ರೀಲ 2019 | | | | | | |
| ಮೇ 2019 | | | | | | |
| ಜೂನ್ 2019 | | | | | | |
| ಜುಲೈ 2019 | | | | | | |
| ಅಗಷ್ಟ 2019 | | | | | | |
| ಸೆಪ್ಟಂಬರ್ 2019 | | | | | | |
| ಅಕ್ಟೋಬರ್ 2019 | | | | | | |
| ನವಂಬರ್ 2019 | | | | | | |
| ಡಿಸೆಂಬರ್ 2019 | | | | | | |
| ಜನೇವರಿ 2020 | | | | | | |
| ಫೆಬ್ರುವರಿ 2020 | | | | | | |
| ಮಾರ್ಚ್2020 | | | | | | |
| ಇತರೆ | | | | | | |
| ಒಟ್ಟು | | | | | | |

ಸ್ಥಳ :

ಬಟವಾಡೆ ಅಧಿಕಾರಿಗಳು ಸಹಿ

ದಿನಾಂಕ :

ಕಛೇರಿಯ ವಿಳಾಸ

ಮೊಹರು

## ಪ್ರಮಾಣ ಪತ್ರ

**ವರಮಾನಗಳ ವಿವರಗಳು**

**(ತಂದೆ/ತಾಯಿ/ಪೋಷಕರುಗಳ ವರಮಾನ/ಆದಾಯವು ಖಾಸಗಿ ವೃತ್ತಿಯಿಂದ ಹೊಂದಿರುವವರ ಕೃಷಿಕರ ಕೋಟಾದಡಿ ಪ್ರವೇಶ ಪಡೆಯುವ ಅಭ್ಯರ್ಥಿಗಳು ಸಲ್ಲಿಸುವ ಪ್ರಮಾಣ ಪತ್ರ)**

ಶ್ರೀಮತಿ/ಶ್ರೀ ______________________________ ರವರು ಸ್ವಂತ ವೃತ್ತಿ/ಖಾಸಗಿ ವೃತ್ತಿ ಹೊಂದಿದ್ದು, ಇವರ 2019–20 ನೇ ಸಾಲಿನ ಸ್ವಂತ/ಖಾಸಗಿ ವೃತ್ತಿಯ ವಾರ್ಷಿಕ ಒಟ್ಟು ಆದಾಯವು ರೂ__________/– (ಅಕ್ಷರಗಳಲ್ಲಿ ______________________________) ಇರುತ್ತದೆ. ಮುಂದುವರೆದು, ನಾನು ಆದಾಯ ತೆರಿಗೆ ಪಾವತಿಸುವವನಾಗಿದ್ದು, ಈ ವರ್ಷದ 2019–20 ರ ಆದಾಯ/ವರಮಾನ ತೆರಿಗೆಯನ್ನು ಸಲ್ಲಿಸಿದ ವಿವರಗಳನ್ನು ಲಗತ್ತಿಸಿದ್ದೇವೆ.

ದಿನಾಂಕ: ಸಹಿ. (ತಂದೆ/ತಾಯಿ/ಪೋಷಕರು *)

ಸ್ಥಳ: (* ತಂದೆ/ತಾಯಿ ಜೀವಂತವಾಗಿರದಿದ್ದಲ್ಲಿ)

### <u>ಅನುಬಂಧ – I</u>

ಅಭ್ಯರ್ಥಿ/ತಂದೆ/ತಾಯಿ/ಪೋಷಕರು ಕೃಷಿ ವರಮಾನದ ಜೊತೆಗೆ ಬೇರೆ ಮೂಲಗಳಿಂದ ಬರುವ ಆದಾಯದ ವಾರ್ಷಿಕ ವಿವರಗಳನ್ನು ಸಲ್ಲಿಸಬೇಕಾದ ಅಫಿಡವಿಟ್‌ನ ನಮೂನೆ

**<u>ಅಫಿಡವಿಟ್</u>**

(ಸ್ಟಾಂಪ್ ಪೇಪರ್ ರೂ. 50/– ರಲ್ಲಿ)

ನಾನು (ಹೆಸರು) ______________________________ ವಯಸ್ಸು ________ ವರ್ಷ, ವಿಳಾಸ ______________________________________________ ______________________ ದಲ್ಲಿ ವಾಸವಾಗಿದ್ದೇನೆಂದು ಈ ಕೆಳಕಂಡಂತೆ ಘೋಷಿಸುತ್ತೇನೆ. ಶ್ರೀಮತಿ/ಶ್ರೀ______________________________ನಾನು, ಶ್ರೀಮತಿ/ಶ್ರೀ ____________________ ______________________ ಯವರ ಮಗ/ಮಗಳಾಗಿದ್ದು, ನನ್ನ ವೃತ್ತಿಯು ______________ ______________________ ಆಗಿರುತ್ತದೆ. ನನ್ನ ಎಲ್ಲಾ ರೀತಿಯ ಮೂಲಗಳಿಂದ ವಾರ್ಷಿಕ ಆದಾಯಗಳ ವಿವರಗಳು ಈ ಕೆಳಗಿನಂತಿವೆ.

**2019–20 ರ ವಾರ್ಷಿಕ ವರಮಾನ (01.4.2019 ರಿಂದ 31.3.2020)**

| ಕ್ರ.ಸಂ | ವರಮಾನದ ವಿವರಗಳು | ಒಟ್ಟು ಮೊತ್ತ |
|---|---|---|
| ಎ. | ಕೃಷಿ ಕಾರ್ಮಿಕ/ ಬೇಸಾಯದ ಮೂಲಕ | ರೂ. |
| ಬಿ. | ವೃತ್ತಿಯ ಮೂಲಕ (ಒಟ್ಟು ಮೊತ್ತ) ವರಮಾನ ತೆರಿಗೆ ಪಾವತಿಸಿರುವಂತೆ | ರೂ. |
| ಸಿ. | ವೇತನದ ಮೂಲಕ ವರಮಾನದ ಮೊತ್ತ (ಲಗತ್ತಿಸಿದೆ) | ರೂ. |
| ಡಿ. | ಬೇರೆ ಮೂಲಗಳಿಂದ (ವಿವರಿಸಿ) | ರೂ. |
| | ಒಟ್ಟು | ರೂ. |

ನನ್ನ ಮೂಲ ವರಮಾನವು ಕೃಷಿ/ಕಾರ್ಮಿಕ ವೃತ್ತಿಯಿಂದ ಆಗಿರುತ್ತದೆ.

**ಸೂಚನೆ:** ಮೇಲೆ ತಿಳಿಸಿರುವಂತೆ ಒದಗಿಸುವ ಪ್ರಮಾಣ ಪತ್ರಗಳು ನೈಜತೆಯಿಲ್ಲದಿದ್ದರೆ, ತಿರಸ್ಕರಿಸುವ ಹಾಗೂ ಕಾನೂನು ರೀತಿಯ ಕ್ರಮಗಳನ್ನು ಅಭ್ಯರ್ಥಿಗಳ ಮೇಲೆ ತೆಗೆದುಕೊಳ್ಳುವ ಅಧಿಕಾರವನ್ನು ಕೃಷಿ ವಿಶ್ವವಿದ್ಯಾನಿಲಯಗಳಯ ಹೊಂದಿರುತ್ತವೆ.

ದಿನಾಂಕ: ಸಹಿ. (ತಂದೆ/ತಾಯಿ/ಪೋಷಕರು *)

ಸ್ಥಳ: (*ತಂದೆ/ತಾಯಿ ಜೀವಂತವಾಗಿದ್ದಲ್ಲಿ)

ನನ್ನ ಮುಂದೆ ಪ್ರಮಾಣೀಕರಿಸಲಾಗಿದೆ.

ದಿನಾಂಕ: ನ್ಯಾಯಾಧೀಶರು/ನೋಟರಿಯವರ ಸಹಿ

ಸ್ಥಳ: ಮತ್ತು ಮೊಹರಿನೊಂದಿಗೆ